[illegible]
([illegible])
[illegible]

[illegible]
[illegible]
[illegible]
[illegible]

[illegible]
[illegible]
[illegible]
[illegible]

[illegible]
[illegible]
[illegible]
[illegible]

[illegible]
[illegible]
[illegible]
[illegible]

ನೆಹರೂ ಬಾಲ ಪುಸ್ತಕಾಲಯ

ಭಾರತಿಯಾರ್

(ಸುಬ್ರಹ್ಮಣ್ಯ ಭಾರತಿ ಅವರ ಕಥೆ)

ರಾ. ಅ. ಪದ್ಮನಾಭನ್

ಅನುವಾದ

ಡಾ|| ಎಸ್. ಕೇಶವಮೂರ್ತಿ

ಚಿತ್ರಗಳು

ಗೋಪುಲು



ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ

ಛಾಯಾಚಿತ್ರಗಳಿಗಾಗಿ ಕೆಳಕಂಡವರಿಗೆ ಕೃತಜ್ಞತೆಗಳು:
1. ಸಮಾಚಾರ ವಿಭಾಗ, ತಮಿಳುನಾಡು ಸರ್ಕಾರ
2. 'ಹಿಂದು', ಮದರಾಸು
3. ಲೇಖಕರು

ISBN 81-237-1068-2

ಮೊದಲ ಮುದ್ರಣ :1994 (ಶಕ 1916)
ಎರಡನೆಯ ಮುದ್ರಣ : 1996 (ಶಕ 1918)
Bharatiyar (*Kannada*)
ರೂ. 10.00
ನಿರ್ದೇಶಕರು, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ
ಎ-5, ಗ್ರೀನ್ ಪಾರ್ಕ್, ಹೊಸದೆಹಲಿ - 110016
ಇವರಿಂದ ಪ್ರಕಟಿತ

ಭಾರತಿ ಅವರು ಹುಟ್ಟಿದ ಮನೆ



ವರಕವಿ

ಜೀವನದಲ್ಲಿ ಮುಂದೆ ನಾವು ಯಾವ ಕೆಲಸವನ್ನು ಮಾಡಿ ಯಾವ ವಿಭಾಗದಲ್ಲಿ ಪ್ರಖ್ಯಾತಿಯನ್ನು ಪಡೆಯುವೆವು ಎಂಬುದು ನಮ್ಮೆಲ್ಲರಿಗೂ ಮುಂಚಿತವಾಗಿಯೇ ಗೊತ್ತಿರುವುದಿಲ್ಲ. ನಮ್ಮಲ್ಲಿ ಕೆಲವರಿಗೆ ಮಾತ್ರ ಚಿಕ್ಕಂದಿನಲ್ಲೇ ಅವರಲ್ಲಿ ಹುದುಗಿರುವ ವಿಶೇಷ ದಕ್ಷತೆ ಏನೆಂಬುದು ಗೊತ್ತಾಗಿಬಿಡುತ್ತದೆ. ಜೀವನದಲ್ಲಿ ಯಾವ ಕ್ಷೇತ್ರದಲ್ಲಿ ಪ್ರಸಿದ್ಧಿ ಪಡೆಯುವೆವು ಎಂಬ ವಿಚಾರ ಅವರಿಗೆ ನಿಶ್ಚಯವಾಗಿ ಗೊತ್ತಾಗಿ ಬಿಡುತ್ತದೆ. ಅಂತಹ ಮಹನೀಯರು ಅದೃಷ್ಟವಂತರೇ ಹೌದು.

ಮುಖ್ಯವಾಗಿ ಮಹಾ ಕವಿಗಳು, ಸಂಗೀತ ವಿದ್ವಾಂಸರು ಮುಂತಾದವರಿಗೆ ಚಿಕ್ಕಂದಿನಲ್ಲೇ ತಮ್ಮ ಜೀವನದ ಮಾರ್ಗ ಸ್ಪಷ್ಟವಾಗಿ ಗೊತ್ತಾಗಿಬಿಡುತ್ತದೆ. ನಾವು ಅಂಥವರನ್ನು ಹುಟ್ಟುಕವಿಗಳು, ಹುಟ್ಟುಸಂಗೀತ ವಿದ್ವಾಂಸರು ಎಂದು ಕರೆಯುತ್ತೇವೆ, ಜ್ಞಾನಿಗಳೆಂದು ಹೇಳುತ್ತೇವೆ.

ನೂರು ವರ್ಷಗಳ ಹಿಂದೆ ತಮಿಳುನಾಡಿನಲ್ಲಿ ದಕ್ಷಿಣ ತಿರುನಲ್‌ವೇಲಿ ಜಿಲ್ಲೆಯ ಎಟ್ಟೆಯಪುರಂ ಎಂಬ ಊರಿನಲ್ಲಿ ಚಿತ್ರಭಾನು ವರ್ಷದ ಕಾರ್ತಿಕ ಮಾಸದ ಮೂಲಾ ನಕ್ಷತ್ರದಲ್ಲಿ ಅಂದರೆ 11.12.1882 ರಂದು ಹುಟ್ಟಿದ ಸುಬ್ರಹ್ಮಣ್ಯ ಭಾರತಿ ಎಂಬ ಮಹಾಕವಿ ಚಿಕ್ಕಂದಿನಲ್ಲೆ ತಮಗೂ ಕವಿತೆಗೂ ಇರುವ ನಿಕಟ ಸಂಬಂಧವನ್ನು ಅರಿತುಕೊಂಡರು. ಆದರೆ ಅವರ ತಂದೆ ಮಗನಿಗೆ ಆಂಗ್ಲ ಶಿಕ್ಷಣವನ್ನು ಕೊಟ್ಟು ಗಣಿತ, ಇಂಜಿನೀಯರಿಂಗ್ ವಿದ್ಯೆಯನ್ನು ಕಲಿಸಿ ಅವನು ದೊಡ್ಡ ಅಧಿಕಾರಿಯಾಗಿ ಹಣ ಗಳಿಸಬೇಕು ಎಂದು ಬಯಸಿದರು.

ಸುಬ್ರಹ್ಮಣ್ಯ ಭಾರತಿಯ ಮುದ್ದು ಹೆಸರು "ಸುಬ್ಬಯ್ಯ". ಸುಬ್ಬಯ್ಯನಿಗೆ ಇಂಗ್ಲೀಷ್ ಭಾಷೆಯಲ್ಲಿ ಮನಸ್ಸು ಬೆರೆಯಲಿಲ್ಲ. ಗಣಿತ ಮತ್ತು ಇಂಜಿನಿಯರಿಂಗ್ ವಿದ್ಯೆ ಬೇವಿನಕಾಯಂತೆ ಕಹಿಯಾಗಿದ್ದವು. ತಂದೆಯವರು "ಲೆಕ್ಕಹಾಕು" ಎಂದರೆ ಅವನ ಮನಸ್ಸಿನಲ್ಲಿ "ಲೆಕ್ಕ ಬಿಕ್ಕ ಸಮಸ್ಯೆ ಬರೀ ವ್ಯರ್ಥ" (ಕಣಕ್ಕು ಪಿಣಕ್ಕು; ವಣಕ್ಕು ಆಮಣಕ್ಕು = ಲೆಕ್ಕ ಬಿಕ್ಕ ಸಮಸ್ಯೆ ಮನಸ್ಸನ್ನು ನೋಯಿಸುವಂತಹುದು, ಹರಳೆಣ್ಣೆಯಂತೆ) ಎಂದು ಆದ್ಯಾನು ಪ್ರಾಸ ಮತ್ತು ಅಂತ್ಯಾನುಪ್ರಾಸವನ್ನು ಜೋಡಿಸುತ್ತಾ ಹೋಗುತ್ತಿದ್ದನು.

ಐದನೆಯ ವಯಸ್ಸಿನಲ್ಲಿ ಸುಬ್ಬಯ್ಯ ತಾಯನ್ನು ಕಳೆದುಕೊಂಡ. ತಾಯಿಲ್ಲದ ಮಗು ಎಂದು

ಎಲ್ಲರೂ ಸುಬ್ಬಯ್ಯನ ಹತ್ತಿರ ಪ್ರೀತಿಯಿಂದ ವರ್ತಿಸುತ್ತಿದ್ದರು. ಸ್ಲೇಟು ಪುಸ್ತಕವನ್ನು ಕೈಯಲ್ಲಿ ಹಿಡಿದು ಸುಬ್ಬಯ್ಯ ಶಾಲೆಗೆ ಹೋಗುತ್ತಿದ್ದ. ಆದರೆ ಹೋಗುವ ದಾರಿಯಲ್ಲೇ ಅವುಗಳನ್ನು ಎಲ್ಲಾದರೂ ಮರೆತು ಇಟ್ಟುಬಿಟ್ಟು ತೋಟ, ಕೆರೆಗಳ ಪ್ರಾಕೃತಿಕ ಸೌಂದರ್ಯವನ್ನು ಸವಿಯುತ್ತ ಕುಳಿತು ಬಿಡುತ್ತಿದ್ದ!





ಆಕಾಶದಲ್ಲಿ ಮೋಘಗಳ ಗುಂಪು ಚಲಿಸುವ ರಮ್ಯತೆ, ಮರದ ರೆಂಬೆಗಳ ಮಧ್ಯೆ ಸೂರ್ಯನ ಬೆಳಕು ಚೆಲ್ಲಿ ಅವುಗಳು ಮಿನುಗುವ ಸೌಂದರ್ಯ, ಹಕ್ಕಿಗಳ ಇಂಪಾದ ಗಾನ ಆಕಾಶದಲ್ಲಿ ಅವುಗಳು ಚಿಂತೆಯಿಲ್ಲದೆ ಹಾರಾಡುವ ಸೌಂದರ್ಯ, ಸಂಧ್ಯಾ ಸಮಯದ ಕೆಂಪು ಬಣ್ಣದ ಆಕಾಶ - "ಎಷ್ಟು ಕೋಟಿ ಸುಖಗಳನ್ನು ಸೃಷ್ಟಿಸಿದೆಯೋ ಹೇ ನಮ್ಮ ದೇವ! ದೇವ!!" ಎಂದು ಮುಂದೆ ಅವನು ಹಾಡಿದ್ದನ್ನು ಚಿಕ್ಕಂದಿನಲ್ಲೇ ಸವಿದು ನೋಡಿದ್ದ ಸುಬ್ಬಯ್ಯ.



ತಮಿಳು ಓದಿದರೆ ಕೆಲಸಕ್ಕೂ ಹಣ ಸಂಪಾದಿಸುವುದಕ್ಕೂ ದಾರಿಯಿಲ್ಲ ಎಂದು ಅವನ ತಂದೆ ಹೇಳುತ್ತಿದ್ದರು. ಆದರೆ ಮಗ ಸುಬ್ಬಯ್ಯ ಅವರಿಗೆ ಗೊತ್ತಿಲ್ಲದೆ ಒಬ್ಬ ಮುದಿ ಪಂಡಿತರ ಮನೆಗೆ ಹೋಗಿ "ಕಂಬ ರಾಮಾಯಣವನ್ನು" ಓದುತ್ತಿದ್ದ. ತನ್ನ ಚಿಕ್ಕಂದಿನ ಗೆಳೆಯ ಸೋಮ ಸುಂದರನ ಜೊತೆ ದೇವಸ್ಥಾನದ ವಾಹನ ಮಂಟಪದಲ್ಲಿ ತೆರೆಯ ಮರೆಯಲ್ಲಿ ಕುಳಿತು, ತಮಿಳು ಸಾಹಿತ್ಯವನ್ನು ಸವಿಯುತ್ತಿದ್ದ ಸುಬ್ಬಯ್ಯ !

ಬಿರುದು "ಭಾರತಿ"

ಚಿಕ್ಕ ವಯಸ್ಸಿನಲ್ಲೇ ಸುಬ್ಬಯ್ಯನಿಗೆ ಕವಿತೆ ರಚಿಸುವ ಕೌಶಲ ಲಭಿಸಿತ್ತು. ಐದಾರು ವಯಸ್ಸಿನಲ್ಲಿ ಪುಟ್ಟ ಪುಟ್ಟ ಹಾಡುಗಳನ್ನು ಹಾಡತೊಡಗಿದನಂತೆ. ತಂದೆಗೆ ತಿಳಿಯದೇ ಎಟ್ಟೆಯಪುರಂ ರಾಜಸಭೆಯಲ್ಲಿ ದೊಡ್ಡ ದೊಡ್ಡ ಮುದಿ ವಿದ್ವಾಂಸರು ಸಾಹಿತ್ಯ ಚರ್ಚೆ ಮಾಡುತ್ತಿರುವಾಗ ಸುಬ್ಬಯ್ಯ ಅಲ್ಲಿ ಕುಳಿತು ಕೇಳುತ್ತಿದ್ದ. ಕೆಲವು ವೇಳೆ ಯಾರಿಗೂ ತಿಳಿಯದ ಒಂದು ಸಂಗತಿಯನ್ನು ಸಮಯಕ್ಕೆ ತಕ್ಕಂತೆ ಚಾತುರ್ಯವಾಗಿ ಹೇಳುತ್ತಿದ್ದ. ಕವಿಗಳು ಆಶ್ಚರ್ಯದಿಂದ ಅವನನ್ನು ಹೊಗಳುತ್ತ ಇದ್ದರು. ರಾಜನೂ ಸಹ ಪುಟ್ಟ ಮಗುವಿನ ಮೇಧಾಶಕ್ತಿಯನ್ನು ನೆನೆದು ಆನಂದ ಪರವಶನಾಗುತ್ತಿದ್ದನು.

ಸುಬ್ಬಯ್ಯನಿಗೆ ಹನ್ನೊಂದು ವಯಸ್ಸಿರಬಹುದು. ಆಗ ಎಟ್ಟೆಯಪುರದ ರಾಜ ಸಭೆಯಲ್ಲಿ ವಿರುದ್ಧ ಶಿವಜ್ಞಾನಯೋಗಿ ಎಂಬ ತಮಿಳು ಪಂಡಿತರ ಅಧ್ಯಕ್ಷತೆಯಲ್ಲಿ ಮಹಾಕವಿಗಳು ಸೇರಿದ್ದರು. ಚಿನ್ನಸ್ವಾಮಿ ಐಯರ್‌ರವರೂ ಸಹ ಇದ್ದರು. ಊರಿನ ಜನರೆಲ್ಲರೂ ನೆರೆದಿದ್ದರು.

ಕವಿಗಳ ಮಧ್ಯೆ ಹುಡುಗ ಸುಬ್ಬಯ್ಯ ಯಾರನ್ನೂ ಲಕ್ಷಿಸದೇ ನಿಂತಿದ್ದಾನೆ.

ಕವಿಗಳು ತಮಿಳು ಕವಿತೆಗಳ ವ್ಯಾಕರಣ ಮತ್ತು ಲಕ್ಷಣಗಳ ಬಗ್ಗೆ ಪ್ರಶ್ನೆಗಳನ್ನು ಒಂದರ ಮೇಲೊಂದು ಕೇಳುತ್ತಿದ್ದಾರೆ. ಹುಡುಗ ತಟ್ಟನೆ ಉತ್ತರ ಕೊಡುತ್ತಿದ್ದಾನೆ. ಯಮಕ, ತಿರಿಬು ಮುಂತಾದ ಕಠಿಣವಾದ ಅಲಂಕಾರಗಳನ್ನು ವಿವರಿಸುವಂತೆ ಕೇಳುತ್ತಿದ್ದಾರೆ. ಶ್ರಮ ತೆಗೆದುಕೊಳ್ಳದೆ ಲೀಲಾಜಾಲವಾಗಿ ಬಣ್ಣಿಸುತ್ತಾನೆ. ವೆಣ್ಬಾ ಎಂಬ ಚೌಪದಿಯ ಕೊನೆಯ ಮುಕ್ತಾಯದ ಶಬ್ದಗಳನ್ನು ಕೊಟ್ಟು ಚೌಪದಿಯನ್ನು ಪೂರ್ತಿ ಮಾಡುವಂತೆ ಹೇಳುತ್ತಾರೆ. ಕವಿಗಳು ಆಶ್ಚರ್ಯಪಡುವಂತೆ ಬಹು ಬೇಗ ಚೌಪದಿಗಳನ್ನು ಪೂರ್ತಿ ಮಾಡುತ್ತಾನೆ. ಪ್ರಥಮ ಪಾದವನ್ನು ಕೊಟ್ಟು ಚೌಪದಿಯನ್ನು ಹೇಳುವಂತೆ ಕೇಳುತ್ತಾರೆ. ಅವನು ಹಾಡುತ್ತಾನೆ. ವಿಚಾರವೊಂದನ್ನು ಕೊಟ್ಟು ಅದರ ಮೇಲೆ ಚೌಪದಿಯನ್ನು ರಚಿಸುವಂತೆ ಕೇಳುತ್ತಾರೆ. ಕ್ಷಣದಲ್ಲಿ ಚೌಪದಿಯನ್ನು ರಚಿಸಿ ಮುಗಿಸುತ್ತಾನೆ, ಸುಬ್ಬಯ್ಯ.

ಕವಿಗಳ ಸಂತೋಷಕ್ಕೆ ಎಲ್ಲೆಯಿಲ್ಲ. "ಇವನ ನಾಲಿಗೆಯಲ್ಲಿ ಸರಸ್ವತಿ ತಾಂಡವನೃತ್ಯ ಮಾಡುತ್ತಿರುವಳು !" ಎಂದರು ಒಬ್ಬರು. "ಇವನಲ್ಲವೇ ವಾಣಿಯ ಕೃಪಾದೃಷ್ಟಿ ಪಡೆದಿರುವವನು" ಎಂದರು ಮತ್ತೊಬ್ಬರು.

"ನಮ್ಮ ಸುಬ್ಬಯ್ಯ ಸರಸ್ವತಿಯ ವರಪುತ್ರ. ಇಂದಿನಿಂದ ಇವನಿಗೆ ಸರಸ್ವತಿಯ ಕೃಪಾದೃಷ್ಟಿ





ಪಡೆದವನು ಎಂಬುದನ್ನು ಸೂಚಿಸುವ 'ಭಾರತಿ' ಎಂಬ ಬಿರುದನ್ನು ಕೊಡುತ್ತೇವೆ. ಇಂದಿನಿಂದ ನಮ್ಮ ಸುಬ್ಬಯ್ಯ ಸುಬ್ರಹ್ಮಣ್ಯ ಭಾರತೀಯಾಗಿ ಪ್ರಸಿದ್ಧಿಯನ್ನು ಹೊಂದುವ!" ಎಂದು ಆಶೀರ್ವದಿಸಿದರು, ಕವಿಗಳು ಅಧ್ಯಕ್ಷರಾದ ಶಿವಜ್ಞಾನಯೋಗಿ. ಇದೇ ಸುಬ್ಬಯ್ಯ ಭಾರತಿಯಾದ ಕಥೆ.

ಸುಖ ದುಃಖಗಳು



ಭಾರತಿಗೆ ಹನ್ನೊಂದು ವಯಸ್ಸಾದಾಗ ವಿವಾಹ ನಡೆಯಿತು. ಅದು ಆ ಕಾಲದ ರೂಢಿಯಾಗಿತ್ತು; ಚಿಕ್ಕಂದಿನಲ್ಲಿ ವಿವಾಹ. ವಧು ಸೆಲ್ಲಮ್ಮಾಳಿಗೆ ಏಳು ವರ್ಷ ವಯಸ್ಸು.

ವಿವಾಹ ನಾಲ್ಕು ದಿವಸ ವಿಜೃಂಭಣೆಯಿಂದ ನಡೆಯಿತು. ಎಟ್ಟೆಯಪುರದ ರಾಜನ ಅಭಿಮಾನಕ್ಕೆ ಒಳಗಾಗಿದ್ದ ಇವನಿಗೆ, ಸುತ್ತಮುತ್ತಲಿನ ಜಮೀನ್ದಾರರು ರೇಷ್ಮೆ ವಸ್ತ್ರ, ಶಾಲು, ಉಂಗುರ ಮತ್ತು ಮುತ್ತು ಮಾಲೆಗಳನ್ನು ಕಳುಹಿಸಿದ್ದರು. ಬಂಗಾರದ ನಾಗಸ್ವರ ವಿದ್ವಾಂಸ ರತ್ನ ಸ್ವಾಮಿಯ ಸಂಗೀತ ಕಛೇರಿ ಮತ್ತು ಪ್ರಖ್ಯಾತ ರಮಣಿ ಅಮ್ಮಾಳ್‌ರವರ ಭರತನಾಟ್ಯಗಳ ಏರ್ಪಾಟಾಗಿತ್ತು. ಮೆರವಣಿಗೆ ನಡೆಯಿತು. ಬಾಲಕ ಭಾರತಿ ಎಲ್ಲವನ್ನೂ ಸಂತೋಷದಿಂದ ಸವಿದ. ತನ್ನ ಪುಟ್ಟ ಮಡದಿಯ ಬಗ್ಗೆ ಒಂದು ಪ್ರೇಮಗೀತೆಯನ್ನೂ ಹಾಡಿದ.

ಸಂತೋಷದಿಂದ ವಿವಾಹ ನಡೆದ ಮರು ವರ್ಷವೇ ಒಂದು ದುಃಖದ ಸಂಗತಿ ನಡೆಯಿತು. ಭಾರತಿಯ ತಂದೆ, ಬಿಳಿಯರ ಷಡ್ಯಂತ್ರದಿಂದ ಹತ್ತಿಯ ಗಿರಣಿಯಲ್ಲಿ ದೊಡ್ಡ ನಷ್ಟವನ್ನು ಹೊಂದಿದರು. ಭಾರತಿಯ ಶಿಕ್ಷಣಕ್ಕೆ ಕೊಡುವುದಕ್ಕೂ ಹಣ ಅವರ ಹತ್ತಿರ ಇರಲಿಲ್ಲ. ಪುಟ್ಟ ಬಾಲಕ ಎಟ್ಟೆಯಪುರದ ರಾಜನ ಚಿಕ್ಕಪ್ಪನಿಗೆ ಕವಿತೆಯ ಮೂಲಕ ಒಂದು ಪತ್ರವನ್ನು ಬರೆದ, ಕೃಪೆ ತೋರುವಂತೆ ಬೇಡಿದ.

ಭಾರತೀಯ ಶಿಕ್ಷಣ ತಿರುನಲ್‌ವೇಲಿಯಲ್ಲಿ ತೊಡಗಿತು. ಅಷ್ಟರೊಳಗೆ ಅದೇ ವರ್ಷ ಹಣ ನಷ್ಟಹೊಂದಿದ ತಂದೆ ಮನವೊಡೆದು ತೀರಿಕೊಂಡರು. ತಾಯಿ ಇಲ್ಲದೆ, ತಂದೆಯಿಲ್ಲದೆ ತತ್ತರಿಸಿದ ಬಾಲಕ ಭಾರತಿ ಎಟ್ಟೆಯಪುರವನ್ನು ಬಿಟ್ಟು ಉತ್ತರದ ಕಾಶಿಯಲ್ಲಿದ್ದ ತನ್ನ ಅತ್ತೆ ಕುಪ್ಪಮ್ಮಾಳ್ ಮನೆಗೆ ಹೋದ.

ಕಾಶಿ ಮತ್ತು ಗಂಗೆ

ಕಾಶಿ ಪಟ್ಟಣವನ್ನು ಒಂದು ಪುಟ್ಟ ಭಾರತವೆಂದು ಹೇಳಬಹುದು. ದೇಶದ, ಹಲವಾರು ಪ್ರದೇಶದ ಜನರನ್ನು ಕಾಶಿಯಲ್ಲಿ ಕಾಣಬಹುದು. ಭಾರತದ ವಿಸ್ತಾರವನ್ನು ಅದರ ಹಲವಾರು ಜನರನ್ನು, ಅವರ ಸಂಸ್ಕೃತಿ, ಆಚಾರ ವಿಚಾರಗಳನ್ನು ಅರಿತುಕೊಳ್ಳಲು ಕಾಶಿ ಒಂದು ಉತ್ತಮ ಪಟ್ಟಣ. ಇಲ್ಲಿ ಭಾರತಿ ತಮ್ಮ ಅತ್ತೆ ಕುಪ್ಪಮ್ಮಾಳ್ ಮನೆಯಲ್ಲಿ ಉಳಿದುಕೊಡು ಜೈನಾರಾಯಣ ವ್ಯಾಸ ಕಾಲೇಜಿನಲ್ಲಿ ಸೇರಿ ಅಲಹಬಾದ್ ವಿಶ್ವ ವಿದ್ಯಾನಿಲಯದ ಪ್ರವೇಶ ಪರೀಕ್ಷೆಗೆ ಓದಿದ.

ಗಂಗಾನದಿಯ ದಡದಲ್ಲಿ ಹನುಮಂತ ಘಾಟ್ ಎಂಬಲ್ಲಿ ಒಂದು ಶಿವಮಠವಿದೆ. ಭಾರತಿಯ ಮಾವ ಈ ಶಿವಮಠದ ಮುಖ್ಯಸ್ಥರಾಗಿದ್ದರು.

ಹೊಸದಾಗಿ ಕಾಶಿಗೆ ಬಂದಾಗ ಭಾರತಿ ಪ್ರತಿದಿನವೂ ನುಣ್ಣಗೆ ಮುಖ ಕ್ಷೌರ ಮಾಡಿಕೊಂಡು ಕಾಲೇಜಿಗೆ ಹೋಗಿ ಬಂದ. ಮುಖದಲ್ಲಿ ಮೀಸೆ ಇರಲಿಲ್ಲ. ಒಂದು ದಿನ ಒಬ್ಬ ಮಿತ್ರ ಕೇಳಿದ "ನಿಮ್ಮ ಮನೆಯಲ್ಲಿ ಎಡೆಬಿಡದೆ ಸಾವಿನ ದುಃಖ ಬಂದಿರುವುದೇನು ?"

ಭಾರತಿಗೆ ಇದು ಅರ್ಥವಾಗಲಿಲ್ಲ. ಸಾವಿನ ದುಃಖ ಬಂದಾಗ ಮೀಸೆ ಬೋಳಿಸಿಕೊಳ್ಳುವುದು ಉತ್ತರದ ರೂಢಿ ಎಂದು ಮಿತ್ರ ವಿವರಿಸಿದ. ಭಾರತಿ ಗೊಳ್ಳೆಂದು ನಕ್ಕನು. ದಕ್ಷಿಣದ ಬ್ರಾಹ್ಮಣರಲ್ಲಿ ಹೆಚ್ಚು ಜನರಿಗೆ ಮೀಸೆ ಇರುವುದಿಲ್ಲ. ತಾನು ಅಂತಹ ಕುಟುಂಬದಲ್ಲಿ ಹುಟ್ಟಿದವನಾದ್ದರಿದ, ಮೀಸೆ ಬೆಳೆಸಲಿಲ್ಲ ಎಂದು ವಿವರಿಸಿದ.

ಈ ಘಟನೆಯ ನಂತರ ಭಾರತಿ ಮೀಸೆ ಬೆಳೆಸತೊಡಗಿದ. ಚೂಪಾದ ಮೀಸೆ ಅವನ ಮುಖಕ್ಕೆ ಒಂದು ಹೊಸ ಗಾಂಭೀರ್ಯವನ್ನು ಕೊಟ್ಟಿತು.

ಅಷ್ಟೇ ಅಲ್ಲ, ಉತ್ತರದ ಜನರು ಹಾಕುವಂತೆ ಕಚ್ಚೆಪಂಚೆ, ಕೋಟು, ತಲೆಯಲ್ಲಿ ಗುಚ್ಛದಿಂದ ಕೂಡಿದ ಪೇಟ ಮುಂತಾದುವುಗಳನ್ನು ತೊಡಲು ಪ್ರಾರಂಭಿಸಿದ, ಭಾರತಿ. ಅವನ ಮನಸ್ಸಿನಿಂದ ಸಾಧಾರಣ ಆಚಾರಗಳು ಮರೆಯಾದುವು. ಅವನು ಧೈರ್ಯದಿಂದ ಹೊಸ ಆಚಾರ-ವಿಚಾರಗಳನ್ನು ಆಚರಿಸತೊಡಗಿದ.

ಕಾಶಿ ಪಟ್ಟಣವು ಭಾರತೀಯ ಮನಸ್ಸನ್ನು ವಿಶಾಲಗೊಳಿಸಿತು. ಭಾರತ ದೇಶದ ವಿಸ್ತೃತ ಸಂಸ್ಕೃತಿ ಅವನನ್ನು ಆವರಿಸಿತು. ಭಾರತೀಯ ಐಕ್ಯತೆಯನ್ನು ಮನದಟ್ಟು ಮಾಡಿಕೊಂಡನು.



ಕಾಶಿ ನಗರದ ವಿದ್ವಾಂಸರ ಉಪನ್ಯಾಸವನ್ನು,
ಕಾಂಚಿಯುವರೆಲ್ಲ ಕೇಳುವಂತಹ ಸಾಧನವನ್ನು ಕಂಡುಹಿಡಿಯೋಣ,
ಎಂದೂ,
ಗಂಗಾ ತೀರದಲ್ಲಿ ಬೆಳೆಯುುವ ಗೋದಿಗೆ,
ಕಾವೇರಿ ತೀರದ ವೀಳೆದೆಲೆಗೆ ಬದಲಾಯಿಸಿಕೊಳ್ಳುವ. ಎಂದೂ

ಮುಂದೆ ಭಾರತಿ ಹಾಡಿದ ಪದ್ಯಗಳ ವಿಚಾರಗಳಲ್ಲಿ ಅವರ ಕಾಶಿಪಟ್ಟಣ ವಾಸದ ಛಾಯೆಯನ್ನು ಕಾಣುತ್ತೇವೆ.

ಮತ್ತೆ ಭಾರತ ದೇಶದ ಬಗ್ಗೆ ಭಾರತದ ಮಕ್ಕಳು ಹೇಗೆ ಹೆಮ್ಮೆ ಪಡಬೇಕು ಎಂದು ಭಾರತಿ ಮುಂದೆ ಹಾಡಿದಾಗ, ಅವನ ಕಾಶಿ ಪಟ್ಟಣದ ವಾಸ ಮತ್ತು ಅವನು ಗಂಗೆಯನ್ನು ಅನುಭವಿಸಿದ ಹಿರಿಮೆ ಕಂಡುಬರುತ್ತದೆ.

ಗೌರವಾನ್ವಿತ ಹಿಮಾಲಯುವು ನಮ್ಮ ಬೆಟ್ಟವೇ
ಈ ಪ್ರಪಂಚದಲ್ಲಿ ಅದಕ್ಕೆ ಸರಿಸಮುನಾದುದು ಬೇರಿಲ್ಲ.
ಸಿಹಿ ನೀರಿನ ಗಂಗೆ ನಮ್ಮ ನದಿಯೇ
ಇದರ ಹಿರಿಮೆಗೆ ಈಡು ಕೊಡುವುದಕ್ಕೆ ಬೇರೆ ಉಂಟೆ ?





ಭಾರತಿಯ ಆಚಾರ-ವಿಚಾರ, ಭಾವನೆಗಳಲ್ಲಿ ಉಂಟಾದ ಬದಲಾವಣೆಗಳು ಅವನ ಮಾವನಿಗೆ ಒಪ್ಪಿಗೆ ಆಗಲಿಲ್ಲ. ಪರಮ ವೈದಿಕರು ಅವರು. ಭಾರತಿಯ ಮೀಸೆ-ಕ್ರಾಪು, ಪೇಟಗಳನ್ನು ಕಂಡು ಇದು ಅನಾಚಾರವೆಂದು ಅವನನ್ನು ದೂರವಿಟ್ಟರು. ಭಾರತಿಯೊಡನೆ ಮಾತನಾಡುವುದನ್ನೂ ಊಟ ಮಡುವುದನ್ನೂ ನಿಲ್ಲಿಸಿಬಿಟ್ಟರು. ಆದರೆ 'ಮಾರ್ಗಶಿರ' ಮಾಸದಲ್ಲಿ ಒಂದು ದಿನ ಅವರಿಗೆ ಭಾರತಿಯ ಹಿರಿಮೆಯನ್ನು ತಿಳಿಯಲು ಅವಕಾಶ ಸಿಕ್ಕಿತು.



ಭಾರತಿಯ ಮಾವ ಪ್ರತಿದಿನ ಶಿವಪೂಜೆ ಮಾಡುವವರು. ಮಠವಾದ್ದರಿಂದ ನೂರಾರು ಯಾತ್ರಿಕರು ದೇವರ ದರ್ಶನಕ್ಕೆ ಬರುತ್ತಿದ್ದರು. ಪೂಜೆ ದೀರ್ಘವಾಗಿ ನಡೆಯುತ್ತಿತ್ತು.

ಮಾರ್ಗಶಿರ ಮಾಸ, "ತಿರುವಾದಿರೈ" ಉತ್ಸವ ನಡೆಯುವಾಗ ಅಭಿಷೇಕ ಮುಗಿದ ನಂತರ ದೀಪಾರಾಧನೆ ಪ್ರಾರಂಭವಾಯ್ತು. ದೀಪಾರಾಧನೆ ಮುಗಿದೊಡನೆ 'ತಿರುವೆಂಬಾವೈ' ಎಂಬ ಹಾಡನ್ನು ಹಾಡಬೇಕು. ಆದರೆ ಅದನ್ನು ಹಾಡುವವರು ಅಂದು ಬರಲಿಲ್ಲ. "ಎಂತಹ ಶೋಧನೆ ಇದು !" ಎಂದು ಭಾರತಿಯ ಮಾವ 'ಕೃಷ್ಣ ಶಿವನ್' ದುಃಖಿತರಾದರು. "ತಿರುವೆಂಬಾವೈ" ಹಾಡದೆ ಪೂಜೆ ಮುಗಿಸುವಂತಿರಲಿಲ್ಲ. ಏನು ಮಾಡುವುದೆಂದು ಪರದಾಡಿದರು.

ಭಾರತಿ 'ತಿರುವೆಂಭಾವೈ' ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುವುದನ್ನು ಅತ್ತೆ ಕೇಳಿದ್ದರು. ಆದುದರಿಂದ ಭಾರತಿಗೆ ರೇಷ್ಮೆ ಪೇಟವನ್ನು ತೊಡಿಸಿ, ರುದ್ರಾಕ್ಷಿ ಮಾಲೆಗಳನ್ನು ಹಾಕಿ, ವಿಭೂತಿ ಪಟ್ಟೆಯನ್ನಿಟ್ಟು, ಅವನನ್ನು ಕರೆತಂದು, 'ತಿರುವೆಂಬಾವೈ' ಹಾಡಿಸಿದರು.

ಭಾರತಿ ಭಕ್ತಿಭಾವದಿಂದ ಹಾಡಿದುದನ್ನು ಕೇಳಿದ ಕೃಷ್ಣಶಿವನ್, ಭಾರತಿಯನ್ನು ತಬ್ಬಿಕೊಂಡು "ಅಪ್ಪಾ ! ನಿನಗೆ ಇಷ್ಟು ಚಿಕ್ಕ ವಯಸ್ಸಿನಲ್ಲಿ ಎಷ್ಟೊಂದು ಜ್ಞಾನ ತುಂಬಿದೆ ! ನಾವು ಬರೀ ವೇಶಧಾರಿಗಳು. ನೀನೇ ನಿಜವಾದ ಭಕ್ತ" ಎಂದು ಬಾಯ್ತುಂಬ ಹೊಗಳಿದರು.



ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು

ಕಾಲೇಜಿಗೆ ಹೋಗುವ ಸಮಯವನ್ನು ಬಿಟ್ಟರೆ ಉಳಿದ ಸಮಯವನ್ನು ಭಾರತಿ ಗಂಗಾ ತೀರದಲ್ಲಿ ಕುಳಿತು, ಅಲೆದಾಡುತ್ತಾ ಕಳೆಯುತ್ತಿದ್ದ. ಕೈಯಲ್ಲಿ ಯಾವಾಗಲೂ ಆಂಗ್ಲ ಕವಿ ಶೆಲ್ಲಿಯ ಗ್ರಂಥವಿರುತ್ತಿತ್ತು. ಗಂಗೆಯ ಪ್ರಾಕೃತಿಕ ಸೌಂದರ್ಯವನ್ನು ಸವಿಯುತ್ತಾ ಕವಿತೆಗಳನ್ನು ರಚಿಸುವುದರಲ್ಲಿ ಲೀನವಾಗುತ್ತಿದ್ದನು, ಭಾರತಿ. ಮಿತ್ರರೊಂದಿಗೆ ದೋಣಿಯಲ್ಲಿ ಕುಳಿತು, ಸಂತಸದ ಯಾತ್ರೆ ಹೋಗುವುದು ಬಹುವಾಗಿ ಹಿಡಿಸುತ್ತಿತ್ತು.

ಭಾರತಿ ಅಲಹಬಾದ್ ವಿಶ್ವವಿದ್ಯಾನಿಲಯದ ಪ್ರವೇಶ ಪರೀಕ್ಷೆಯಲ್ಲಿ ಉತ್ತಮ ರೀತಿಯಲ್ಲಿ ತೇರ್ಗಡೆ ಹೊಂದಿದ. ಭಾರತಿ ತೇರ್ಗಡೆ ಹೊಂದಿದ ಸಮಯದಲ್ಲೇ ಎಟ್ಟೆಯಪುರದ ರಾಜರು ಕಾಶಿಗೆ ಬಂದರು. ಅವರು ಭಾರತಿಯನ್ನು ತಮ್ಮೊಡನೆ ಎಟ್ಟೆಯಪುರಕ್ಕೆ ಕರೆದೊಯ್ದು ಅಲ್ಲಿ ಒಂದು ಕೆಲಸಕ್ಕೆ ನೇಮಿಸಿಕೊಂಡರು. ರಾಜರಿಗೆ ಬರುವ ಪತ್ರಿಕೆಗಳನ್ನು ಓದಿ ಅದರ ಸುದ್ದಿಗಳನ್ನು ಅವರಿಗೆ ತಿಳಿಸುವುದೇ ಆ ಕೆಲಸ.

ಒಂದು ದಿನ ರಾಜರು ರಸ್ತೆಯಲ್ಲಿ ಹೋದಾಗ ಭಾರತಿ ಎದ್ದು ನಿಲ್ಲದೇ ಕುಳಿತೇ ಇದ್ದರು. ಇದರಿಂದ ಅರಮನೆಯಲ್ಲಿ ಪುಟ್ಟ ಕಲಹವೇ ಆಯ್ತು. ಭಾರತಿಗೆ ಕೆಲಸ ಹೋಯ್ತು. ಕ್ಷಮೆ ಯಾಚಿಸಿ ಮತ್ತೆ ಕೆಲಸಕ್ಕೆ ಹೋಗಬಹುದು ಎಂದರು. "ಎಟ್ಟೆಯಾಪುರದ ದೊರೆಯು ಚಿಟ್ಟೆಕಾಯಿ ಗಾತ್ರದ ಭೂಮಿಯ ಒಡೆಯರಾಗಿದ್ದಾರೆ. ಪ್ರಪಂಚ ದೊಡ್ಡದು. ಅಲ್ಲಿ ನನಗೆ ಜಾಗವಿದೆ" ಎಂದು ಹೇಳಿ ನಿರಾಕರಿಸಿದ ಭಾರತಿ.

ಮದ್ರಾಸಿನಲ್ಲಿ "ಸುದೇಶ ಮಿತ್ರನ್" ಎಂಬ ದೈನಿಕ ಪತ್ರಿಕೆಯ ಸಂಪಾದಕರು, ಹೆಸರಾದ ಜಿ. ಸುಬ್ರಮಣ್ಯ ಅಯ್ಯರ್ ಅವರು, ಭಾರತಿಗೆ ತಮ್ಮ ಪತ್ರಿಕೆಯಲ್ಲಿ ಉಪ ಸಂಪಾದಕರ ಕೆಲಸವನ್ನು ಕೊಟ್ಟರು. 1904 ರಲ್ಲಿ ಅವರ 22ನೇ ವಯಸ್ಸಿನಲ್ಲಿ ಭಾರತಿ ಮದ್ರಾಸಿಗೆ ಬಂದು ಸೇರಿದರು.

ಪತ್ರಿಕೋದ್ಯಮಿ ಭಾರತಿ

ಹಿಂದುಮುಂದು ರೂಢಿ ಇಲ್ಲದ ಕೆಲಸವಾದರೂ ಭಾರತಿ ಬಹುಬೇಗ ಸಂಪಾದಕರ ಅಭಿಮಾನಕ್ಕೆ ತಕ್ಕ ಉಪ-ಸಂಪಾದಕರಾದರು. "ಮಿತ್ರನ್" ಪತ್ರಿಕೆಯಲ್ಲಿ ಆಂಗ್ಲಭಾಷೆಯ ಸಮಾಚಾರಗಳನ್ನು ಬೇಗನೇ ಅಚ್ಚಾ ತಮಿಳಿನಲ್ಲಿ ತರ್ಜುಮೆ ಮಾಡುವುದೇ ಅವರ ಕೆಲಸವಾಗಿತ್ತು.

ಜಿ. ಸುಬ್ರಹ್ಮಣ್ಯ ಅಯ್ಯರ್ ಅವರು "ಸುದೇಶ ಮಿತ್ರನ್" ಪತ್ರಿಕೆಯನ್ನು ಬಹಳ ಶ್ರಮದಿಂದ ಒಂದು ದೇಶ ಸೇವೆಗಾಗಿ ನಡೆಸುತ್ತಿದ್ದರು. "ಹಿಂದೂ" ಪತ್ರಿಕೆ ಎಂಬ ಆಂಗ್ಲ ದೈನಿಕ ಪತ್ರಿಕೆಯ ಹೆಸರುವಾಸಿಯಾದ ಸ್ಥಾಪಕರು, ಸಂಪಾದಕರು ಆಗಿದ್ದ ಇವರು ತಮ್ಮ ದೇಶದ ಜನತೆಗೆ ಮಾತೃ ಭಾಷೆಯಲ್ಲಿ ರಾಜಕೀಯವನ್ನು ಬೋಧಿಸಿದರೆ ಮಾತ್ರ ಅವರು ಬೇಗನೆ ಜಾಗ್ರತಗೊಳ್ಳುವರೆಂದೇ "ಮಿತ್ರ" ವನ್ನು ಪ್ರಾರಂಭಿಸಿದರು.

ಜಿ. ಸುಬ್ರಮಣ್ಯ ಅಯ್ಯರ್ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮಹಾಸಭೆಯ ಸಂಸ್ಥಾಪಕರಲ್ಲಿ ಒಬ್ಬರು. ಕಾಂಗ್ರೆಸ್ ಅಧಿವೇಶನದ ಮೊದಲ ಸಭೆಯಲ್ಲಿ ವಾದ-ವಿವಾದ ಮಾಡಿ ಜಾರಿಗೆ ತಂದ ಮೊಟ್ಟ ಮೊದಲನೆಯ ತೀರ್ಮಾನ ತಂದವರೇ ಅವರು. ಪ್ರತಿ ವರ್ಷವೂ ಸೇರುವ ಕಾಂಗ್ರೆಸ್ ಮಹಾಸಭೆಯ ಅಧಿವೇಶನಕ್ಕೆ ಅವರು ತಪ್ಪದೇ ಹೋಗುತ್ತಿದ್ದರು. ಅಷ್ಟೆ ಅಲ್ಲದೆ ತಮ್ಮ ಉಪ-ಸಂಪಾದಕರಾದ ಭಾರತಿಯನ್ನೂ ಅವರು ಆ ಸಭೆಗಳಿಗೆ ಕರೆದುಕೊಂಡು ಹೋಗುತ್ತಿದ್ದರು. ಭಾರತ ದೇಶದ ಸ್ವಾತಂತ್ರ್ಯವನ್ನು ಬಯಸುವ ಹಿರಿಯ ಮುಖಂಡರುಗಳನ್ನೆಲ್ಲಾ ಪ್ರತ್ಯಕ್ಷ ಕಂಡುಕೇಳುವ ಸದವಕಾಶ ಪಡೆದ ಭಾರತಿ ಬೇಗನೆ ತಾವೂ ತೀವ್ರ ದೇಶ ಸೇವೆಯಲ್ಲಿ ನಿರತರಾದರು.

ನಿವೇದಿತಾರ ಆಶೀರ್ವಾದ

1905ರಲ್ಲಿ ಕಾಶಿಯಲ್ಲಿ ಕಾಂಗ್ರೆಸ್ ಸಭೆ ಕೂಡಿತು. ಭಾರತಿ ತಾನು ಮೊದಲೇ ಅರಿತಿದ್ದ ಕಾಶೀ ಪಟ್ಟಣಕ್ಕೆ ಹೋಗಿ ಹಿಂತಿರುಗಿ ಬರುವ ದಾರಿಯಲ್ಲಿ ಕಲ್ಕತ್ತದಲ್ಲಿರುವ "ಡಂ ಡಂ" ಎಂಬ ಸ್ಥಳದಲ್ಲಿ ಸ್ವಾಮಿ ವಿವೇಕಾನಂದರ ಶಿಷ್ಯೆ ಆದ ನಿವೇದಿತಾ ದೇವಿ ಯನ್ನು ಕಾಣಲು ಹೋದರು.

ಸ್ವಾಮಿ ವಿವೇಕಾನಂದರು ಗುಲಾಮ ಭಾರತವು ಪುನಃಶ್ಚೇತನ ಹೊಂದಿ ಸ್ವಾತಂತ್ರ್ಯ

ಪಡೆಯುವುದಕ್ಕೆ ಉತ್ಸಾಹವನ್ನು ತುಂಬಿದರು. ಐರಿಷ್ ಮಹಿಳೆಯಾದ ಅವರ 'ನಿವೇದಿತ' ಆಗ ಭಾರತದ ಸ್ವಾತಂತ್ರ್ಯಕ್ಕಾಗಿ ದುಡಿಯುತ್ತಿರುವ ತೀವ್ರವಾದಿಗಳಿಗೆ ಬೆಂಬಲಿಗರಾಗಿದ್ದರು. ಕಲ್ಕತ್ತದಲ್ಲಿ ಆಗ ಭಯಂಕರ ಪ್ಲೇಗು ರೋಗವು ಕಾಣಿಸಿಕೊಂಡಿತ್ತು. ನಿವೇದಿತಾ ತಮ್ಮ ಜೀವವನ್ನು ಲಕ್ಷಿಸದೆ ಪ್ಲೇಗು ನಿವಾರಣಾ ಕೆಲಸಗಳಲ್ಲಿ ಲೀನರಾಗಿದ್ದರು.

ಭಾರತಿಯನ್ನು ನೋಡಿ ದೇವಿಯವರಿಗೆ ಎಲ್ಲೆ ಇಲ್ಲದಷ್ಟು ಸಂತೋಷವಾಯ್ತು. ದಕ್ಷಿಣದ ಒಬ್ಬ ಯುವಕ, ದೇಶಭಕ್ತ, ತಮ್ಮನ್ನು ಕಾಣಲು ಬಂದರಲ್ಲ ಎಂದು ಸಂತೋಷಪಟ್ಟರು.



ಜಿ. ಸುಬ್ರಮಣ್ಯ ಅಯ್ಯರ್

ಅವರು ಮಾತನಾಡುತ್ತಿದ್ದಾಗ ಭಾರತಿಗೆ ಮದುವೆಯಾಯಿತೇ ಎಂದು ದೇವಿ ಅವರು ಕೇಳಿದರು. ಮದುವೆ ಆಗಿ ಒಂದು ಹೆಣ್ಣು ಮಗು ಸಹಾ ಇದೆ ಎಂದು ಭಾರತಿ ಉತ್ತರಿಸಿದರು. "ಹಾಗಾದರೆ ಕಾಂಗ್ರೆಸ್ ಮಹಾ ಸಭಾಧಿವೇಶನಕ್ಕೆ ನಿಮ್ಮ ಮಡದಿಯನ್ನು ಏಕೆ ಕರೆತರಲಿಲ್ಲ ?" ಎಂದು ದೇವಿಯವರು ಕೇಳಿದರು.

"ಇಂತಹ ರಾಜಕೀಯ ಸಭೆಗಳಿಗೆ ನಮ್ಮ ಮಡದಿಯರನ್ನು ಕರೆದುಕೊಂಡು ಹೋಗುವ ರೂಢಿ ಇಲ್ಲ" ಎಂದರು ಭಾರತಿ.

ನಿವೇದಿತಾ ದೇವಿಯವರಿಗೆ ಕೋಪ ಬಂದಿತು. ಮುಖ ಕೆಂಪೇರಿತು. "ದೇಶದಲ್ಲಿ ಅರ್ಧಭಾಗ ಹೆಂಗಸರು. ಅವರಿಗೆ ಸ್ವಾತಂತ್ರ್ಯ ಎಲ್ಲಿದೆ ? ದೇಶಕ್ಕೆ ನೀವು ಗಳಿಸಲಿರುವ ಸ್ವಾತಂತ್ರ್ಯ ಹೇಗೆ ಪೂರ್ಣ ಆಗುವುದು ? ಮಗನೇ ! ನೀನು ಇದನ್ನು ಮನಸ್ಸಿನಲ್ಲಿಟ್ಟುಕೋ, ನೀನು ಒಬ್ಬ ಕವಿ, ಮುಂದೆ ಪ್ರಸಿದ್ಧಿಯನ್ನು ಪಡೆಯುವೆ. ಸ್ತ್ರೀ ಸ್ವಾತಂತ್ರ್ಯವನ್ನು ನಿನ್ನ ಲಕ್ಷ್ಯವಾಗಿ

ಇಟ್ಟುಕೋ'' ಎಂದು ದೇವಿ ಅವರು ಆಶೀರ್ವದಿಸಿದರು. ಇದು ಭಾರತೀಯ ಮನಸ್ಸಿನಲ್ಲಿ ಆಳವಾಗಿ ನೆಟ್ಟಿತು.

1908ಮತ್ತು 1909ರಲ್ಲಿ "ಸ್ವದೇಶ ಗೀತೆಗಳು" "ಜನ್ಮ-ಭೂಮಿ" ಎಂಬ ಎರಡು ರಾಷ್ಟ್ರಕವಿತೆ ಗ್ರಂಥಗಳನ್ನು ಭಾರತಿ ಪ್ರಕಾಶಿಸಿದಾಗ ಅವುಗಳನ್ನು ನಿವೇದಿತಾ ದೇವಿಯವರಿಗೆ ಸಮರ್ಪಿಸಿದರು.

ಮಹಿಳೆಯರಿಗಾಗಿ ನಡೆಸಿದ "ಚಕ್ರವರ್ತಿನಿ" ಎಂಬ ತಮಿಳು ಮಾಸಿಕ ಪತ್ರಿಕೆಯ ಸಂಪಾದಕರಾಗಿ, ಭಾರತಿಯವರು ಇದೇ ಸಮಯದಲ್ಲಿ ಮಹಿಳಾ ಪ್ರಗತಿಗಾಗಿ ದುಡಿದರು.

ಜ್ಞಾನೋದಯವನ್ನು ತಂದ ಬಂಗಾಳದ ವಿಭಜನೆ

1905ರಲ್ಲಿ ಹಳೆಯ ಬಂಗಾಳ ಜಿಲ್ಲೆಯನ್ನು ಧಾರ್ಮಿಕ ತಳಹದಿಯ ಆಧಾರದ ಮೇಲೆ ಬ್ರಿಟಿಷ್ ವೈಸ್‌ರಾಯಿ ಆಗಿದ್ದ ಕರ್ಜನ್ ವಿಭಜಿಸಿದರು. ಹಿಂದೂ-ಮುಸ್ಲಿಮ್ ಒಂದು ಸೇರದೆ ಇರುವುದಕ್ಕಾಗಿಯೇ ಅದನ್ನು ಒಡೆದು ಆಳುವ ಕುತಂತ್ರವಾಗಿತ್ತು ಇದು. ಇದರಿಂದ ದೇಶವೇ ಕೋಪದಿಂದ ಉರಿದೆದ್ದಿತು.



ನಿವೇದಿತಾ ದೇವಿ

ಸ್ವದೇಶಿ ಚಳುವಳಿ ನಾಡಿನಾದ್ಯಂತ ಹರಡಿತು. ಸ್ವದೇಶೀ ವಸ್ತುಗಳನ್ನು ಪುರಸ್ಕರಿಸು, ವಿದೇಶೀ ವಸ್ತುಗಳನ್ನು ತಿರಸ್ಕರಿಸು, ಎಂದು ದೇಶದ ಮುಖಂಡರು ಸ್ವದೇಶಿ ಶಿಕ್ಷಣವನ್ನು ಕಡ್ಡಾಯ ಮಾಡಿದರು. ದಕ್ಷಿಣದಲ್ಲೂ ಸ್ವದೇಶಿ ಚಳುವಳಿ ಬಲವಾಗಿ ಬೇರೂರಿತು.

ಮದ್ರಾಸಿನಲ್ಲಿ ಭಾರತಿ "ಸ್ವದೇಶ ಮಿತ್ರ" ದಿಂದ ಹೊರಬಂದರು. ಕೆಲವು ಯುವಕರು ಕೂಡಿ "ಇಂಡಿಯಾ" ಎಂಬ ಹೊಸ ವಾರಪತ್ರಿಕೆಯನ್ನು ಪ್ರಾರಂಭಿಸಿ ಭಾರತಿಯನ್ನು ಅದರ ಪ್ರಧಾನ ಸಂಪಾದಕರನ್ನಾಗಿ ಮಾಡಿದರು.

“ಇಂಡಿಯಾ” ವಾರಪತ್ರಿಕೆ

ಭಾರತಿ ತಾವು ಹುಟ್ಟು ಪತ್ರಿಕೋದ್ಯಮಿ ಎಂಬುದನ್ನು ‘ಇಂಡಿಯಾ’ ಪತ್ರಿಕೆಯ ಮೂಲಕ ತೋರಿಸಿಕೊಟ್ಟರು. ದಕ್ಷಿಣದಲ್ಲಿ ಮೊಟ್ಟ ಮೊದಲನೆಯದಾಗಿ “ಇಂಡಿಯಾ” ಪತ್ರಿಕೆಯೇ ರಾಜಕೀಯ ಕಾರ್ಟೂನ್‌ಗಳನ್ನು ಪ್ರಕಾಶಿಸಿತು; ಆಶ್ಚರ್ಯಪಡುವಂತಹ ಕಾರ್ಟೂನುಗಳು. ಕಾರ್ಟೂನ್ ಪತ್ರಿಕೆಯ ಮೊದಲನೆಯ ಪುಟ ಪೂರ್ತಿಯಾಗುವಂತೆ ದೊಡ್ಡ ಪ್ರಮಾಣದಲ್ಲಿ ಇರುತ್ತಿತ್ತು. ಬ್ರಿಟಿಷ್ ಶಾಸಕರನ್ನು ಅವರ ಕೈಯಾಳುಗಳಾಗಿದ್ದ ಕೆಲವು ಭಾರತಿಯರನ್ನೂ ಹೀಯಾಳಿಸಿ ಹಾಕಿದ ಕಾರ್ಟೂನುಗಳು ಒಂದು ಕ್ರಾಂತಿಯನ್ನು ಎಬ್ಬಿಸಿತು.

ಬರಿ ವ್ಯಂಗ್ಯ ಮಾತ್ರವಲ್ಲ, ಸ್ವದೇಶಿ, ದೇಶಭಕ್ತಿ ಮುಂತಾದುವನ್ನು ಬೆಳೆಸುವಂತಹ ಕಾರ್ಟೂನುಗಳು ಹೊರಬಂದವು. ಜನರ ಜನ್ಮಸಿದ್ಧ ಅಧಿಕಾರಗಳನ್ನು ತೋರಿಸುವಂತಹ ಕಾರ್ಟೂನುಗಳು ಹೊರಬಂದವು.

ಕಾರ್ಟೂನುಗಳನ್ನು ವಿವರಿಸುವ “ಚಿತ್ರ ವರ್ಣನೆ”ಯೂ ಸಹ ಇರುತ್ತಿತ್ತು.

ಪತ್ರಿಕೆ ದೇಶೀಯ ರಾಜಕೀಯ ಟಿಪ್ಪಣಿಗಳೂ, ಸಂಪಾದಕೀಯ, ಸಾಹಿತ್ಯ ವಿಭಾಗ, ಕುಟೀರುದ್ಯೋಗ, ಸಮಾಚಾರಗಳೂ, ಕೃಷಿ ವಿಭಾಗವೆಂದೂ ಹಲವಾರು ವಿಷಯುಗಳನ್ನು ಒಳಗೊಂಡಿತ್ತು. 1905ರಿಂದ ರಷ್ಯಾ ದೇಶದಲ್ಲಿ ನಡೆದ ಸ್ವರಾಜ್ಯ ಕ್ರಾಂತಿಗಳೂ, ತುರ್ಕಿಸ್ಥಾನದಲ್ಲಿ ರಾಜರ ಆಳುವಿಕೆಗಳನ್ನು ಹೋಗಲಾಡಿಸುವ ಕ್ರಾಂತಿ, ಭಾರತದ ದೇಶಭಕ್ತರ ಹಲವಾರು ಪ್ರಯತ್ನಗಳೂ, ತೂತ್ತುಕ್ಕುಡಿ ಸ್ವದೇಶಿ ಹಡಗು ಕಂಪನಿಗೆ ಎಡೆಬಿಡದ ಆದರದ ಸ್ವಾಗತ, ಹೊರದೇಶದ ಸ್ವಾತಂತ್ರ್ಯ ಯೋಧರುಗಳಾದ ಗ್ಯಾರಿಬಾಲ್ಡಿ, ಮೆಜ್ಜಿನಿಗಳ ಜೀವನ ಚರಿತ್ರೆ, ಜ್ಞಾನಿ ಯೂಸೊಪಿನ “ಸಾಮಾಜಿಕ ಒಪ್ಪಂದ”, ಭಾರತಿಯ “ಜ್ಞಾನರಥ” ಮುಂತಾದ ಹಲವಾರು ವಿಷಯುಗಳು ‘ಇಂಡಿಯಾ’ದಲ್ಲಿ ಪ್ರಕಟವಾದವು. ಹೀಗೆ ಇಂಡಿಯಾ ಒಂದು ಪರಿಪೂರ್ಣ ಪತ್ರಿಕೆಯಾಗಿತ್ತು.

ಆದರ ಶೈಲಿ ಮನಮುಟ್ಟುವಂತಹ ಆಕರ್ಷಕ ಶೈಲಿಯಾಗಿತ್ತು. ಓದುಗರನ್ನು ಎಚ್ಚೆತ್ತು ನೆಟ್ಟಗೆ ಕುಳಿತುಕೊಳ್ಳುವಂತೆ ಮಾಡಿತು. ದೇಶಭಕ್ತಿಯನ್ನು ಬರೀ ಕಾಲ ಕಳೆಯುವಂತಹ ವಿಚಾರವನ್ನಾಗಿ ಮಾಡದೇ, ಮೂಲಭೂತ ತತ್ವಗಳನ್ನು ಓದುಗರಿಗೆ ಮನದಟ್ಟು ಮಾಡಿಕೊಟ್ಟಿತು.

ಹೆಚ್ಚು ಪ್ರತಿಗಳು ಮಾರಾಟವಾದವು. ಆ ಕಾಲದಲ್ಲಿ ತಮಿಳಿನಲ್ಲಿ 4000ಪ್ರತಿಗಳನ್ನು ಮಾರಿದ ಒಂದೇ ಪತ್ರಿಕೆಯೆಂದರೆ ಇದು.

ಅದರ ಚಂದಾದರದಲ್ಲೂ ಕೆಲವು ಹೇಳತಕ್ಕಂಥ ಅಂಶಗಳಿದ್ದವು. ಸರ್ಕಾರದವರಿಗೆ ಪ್ರತಿವರ್ಷ 50 ರೂಪಾಯಿ, ಜಮೀನ್ದಾರರು ಮತ್ತು ಹಣವಂತರಿಗೆ ವರ್ಷದ ಚಂದಾ 30 ರೂಪಾಯಿ. ಉಳಿದವರಿಗೆ ವಾರ್ಷಿಕ ಚಂದ ಮೂರು ರೂಪಾಯಿ ಮಾತ್ರ !

ಜಾಹೀರಾತುಗಳ ಮೂಲಕ ಇಂಡಿಯಾ ಪತ್ರಿಕೆಗೆ ಹೆಚ್ಚು ವರಮಾನವಿತ್ತು. ಹೋಲಿಸಲಾಗದ

ವ್ಯಾಪಕತೆ ಮತ್ತು ಹೆಸರುವಾಸಿಯಾದ ಆ ವಾರಪತ್ರಿಕೆಯ ಹದಿನಾರು ಪುಟಗಳಲ್ಲಿ, ನಾಲ್ಕು ಪುಟಗಳಷ್ಟು ಜಾಹೀರಾತುಗಳಿದ್ದವು.

"ಇಂಡಿಯಾ" ಪತ್ರಿಕೆಯ ಕಾರ್ಟೂನು; ಆಮದಾದ ವಿದೇಶ ವಸ್ತ್ರಗಳೆಂಬ ಅಸುರನನ್ನು ಮದರಾಸಿನ ಮಕ್ಕಳು ಕತ್ತರಿಸಿ ತುಂಡು ಮಾಡುವ ಪ್ರಸಂಗ.



ತಿಲಕರ ಸೇವಕ

1907ರಲ್ಲಿ ಸೂರತ್ ನಗರದಲ್ಲಿ ಕಾಂಗ್ರೆಸ್ ಮಹಾಸಭೆ ನಡೆಯಿತು. ಈ ಮಹಾಸಭೆಯಲ್ಲಿ ಭಾರತಿಯಾರ್ ಮೊಟ್ಟಮೊದಲು ಲೋಕಮಾನ್ಯ ತಿಲಕರನ್ನು ಭೇಟಿ ಮಾಡಿದರು. ತಿಲಕರ ಸಿದ್ಧಾಂತಗಳು ಮುಂಚಿತವಾಗಿಯೇ ಭಾರತಿಯಾರನ್ನು ಆಕರ್ಷಿಸಿದ್ದವು. "ಸ್ವಾತಂತ್ರ್ಯ ನಮ್ಮ ಜನ್ಮಸಿದ್ಧ ಅಧಿಕಾರ, ಅದನ್ನು ಪಡೆಯುವುದಕ್ಕೆ ನಾವು ಬಿಳಿಯರ ಹತ್ತಿರ ಭಿಕ್ಷೆ ಏಕೆ ಕೇಳಬೇಕು ? ನಮ್ಮ ಹಕ್ಕುಗಳನ್ನು ಉಳಿಸಿಕೊಳ್ಳಲು ನಾವು ನಮ್ಮನ್ನು ಬಲಪಡಿಸಿಕೊಂಡು ತೀವ್ರತೆಯಿಂದ ಹೋರಾಡಬೇಕು" ಎಂದು ಮೊಟ್ಟಮೊದಲು ಹೇಳಿದ ಮುಖಂಡರು ತಿಲಕರೊಬ್ಬರೇ. ತಿಲಕರ ಈ ತೀವ್ರವಾದಿ ದಾರಿಯನ್ನು ಒಪ್ಪದ ಕಾಂಗ್ರೆಸ್ ವಾದಿಗಳೂ ಇದ್ದರು. ಇವರಿಗೂ, ತಿಲಕರ ಅಭಿಮಾನಿಗಳಿಗೂ ಸೂರತ್‌ನಲ್ಲಿ ಜಗಳವಾಗಿ ಮಹಾಸಭೆ ಗಲಭೆಯೊಂದಿಗೆ ನಿರ್ಣಯವಿಲ್ಲದೇ ಮುಕ್ತಾಯವಾಯಿತು.

ಸೂರತ್‌ನಿಂದ ಹಿಂದಿರುಗಿದ ಭಾರತಿ ತಿಲಕರ ಪಕ್ಷದ ತತ್ವಗಳನ್ನು ವಿವಿಸುವ ತೀವ್ರವಾದಿಯಾದರು. ಸಾಮಾನ್ಯ ಜನರ ಸಭೆಗಳನ್ನು ಕೂಡಿಸಿ ಭಾಷಣ ಮಾಡಿದರು. ಅಲ್ಲಿ ಹಾಡಿದರು. ಇಂಡಿಯಾ ಪತ್ರಿಕೆಯಲ್ಲಿ ಖಂಡಿಸಿ - ಮಂಡಿಸಿ ಬರೆದರು. ಕಾರ್ಟೂನುಗಳನ್ನು ಹೊರಪಡಿಸಿದರು.

ಮಕ್ಕಳ ಭಾರತ (ಬಾಲ ಭಾರತ) ಎಂಬ ಒಂದು ಸಂಘವನ್ನು ಸ್ಥಾಪಿಸಿದರು. ತಮ್ಮಂತಹ ಯುವಕರ ಮೂಲಕ ಸಂಘದ ಚಟುವಟಿಕೆಗಳನ್ನು ನಗರದ ಮೂಲೆ ಮೂಲೆಯಲ್ಲಿ ನಡೆಸಿದರು, ಮಾತನಾಡಿದರು. ಇಂತಹ ಸಂಘ ಸಂಸ್ಥೆಗಳು ಆಂಧ್ರಪ್ರದೇಶದಲ್ಲೂ ಜನ್ಮತಾಳುವಂತೆ ಮಾಡಿದರು. "ಬಾಲಭಾರತ" ಅಥವಾ "ಯಂಗ್ ಇಂಡಿಯಾ" ಎಂಬ ಆಂಗ್ಲ ಮಾಸ ಪತ್ರಿಕೆಯನ್ನು ಪ್ರಾರಂಭಿಸಿದರು. ವೃದ್ಧ ಅಧ್ಯಕ್ಷ ಡಾ।। ನಂಜುಂಡರಾವ್ ಇದಕ್ಕೆ ಸಹಾಯ ಮಾಡಿದರು.







ಲಾಲಾ ಲಜಪತ್ ರಾಯ್, ತಿಲಕ್, ಬಿಪಿನ್‌ಚಂದ್ರ ಪಾಲ್

ಬಾಲಭಾರತ ಸಂಘದ ಮೂಲಕ ಮುಂಚಿತವಾಗಿಯೇ 1907ರ ಮೇ ತಿಂಗಳಲ್ಲಿ ಪ್ರಸಿದ್ಧಿ ಪಡೆದ ಉಪನ್ಯಾಸಕರೂ, ತಿಲಕರ ಪಕ್ಷದ ಅಧ್ಯಕ್ಷರೂ ಆದ ಬಿಪಿನ್ ಚಂದ್ರ ಪಾಲರನ್ನು ಮದ್ರಾಸಿಗೆ ಕರೆತಂದು ಹಲವೆಡೆ ಉಪನ್ಯಾಸ ಮಾಡಲು ಏರ್ಪಾಡು ಮಾಡಿದ್ದರು, ಭಾರತಿ. ತಿರುವಲ್ಲಿಕ್ಕೇಣಿ ಸಮುದ್ರ ತೀರದಲ್ಲಿ ಬಿಪಿನ್ ಚಂದ್ರಪಾಲ್ ಮಾಡಿದ ಉಪನ್ಯಾಸಗಳು ದಕ್ಷಿಣದಲ್ಲಿ ಒಂದು ಹೊಸ ಜ್ಞಾನೋದಯವನ್ನುಂಟು ಮಾಡಿತು.

THE BALA BHARATA
A MONTHLY ORGAN OF [illegible]
[illegible] NATIONAL REGENERATION
ANNUAL SUBSCRIPTION [illegible] ONLY

THE BALA BHARATA OFFICE
[illegible] MADRAS

[illegible] 29th May, 1908

Srimān B. G. Tilak
Poona.

Dear Sir,

I have received a letter from [illegible] asking me to [illegible] place in Madras [illegible] of the Chennai [illegible] have already [illegible] Case. I hope it will be [illegible] in the course of time [illegible]

[illegible]

[illegible] Congress [illegible] Committee [illegible]

[illegible]

[illegible]

1908ರಲ್ಲಿ ಭಾರತಿ ತಿಲಕರಿಗೆ ಬರೆದ ಪತ್ರ

ಹೀಗೆ ಮದ್ರಾಸ್ ಪ್ರಾಂತ್ಯದ ಎಲ್ಲೆಡೆಯಲ್ಲೂ ತಿಲಕರ ಪಕ್ಷದ ತೀವ್ರವಾದಕ್ಕೆ ಮನ್ನಣೆ ಕೊಟ್ಟರು.

1908ನೇ ಇಸ್ವಿ ಮಾರ್ಚಿ ತಿಂಗಳಲ್ಲಿ "ಸ್ವರಾಜ್ಯ ದಿನ" ಎಂದು ದೇಶದಾದ್ಯಂತ ಆಚರಿಸಿದರು. ಮದ್ರಾಸ್ ತಿರುವಲ್ಲಿ ಕೇಣಿ ಸಮುದ್ರ ತೀರದಲ್ಲಿ ಒಂದು ದೊಡ್ಡ ಮಹಾ ಸಭೆಯನ್ನು ನಡೆಸಿದರು, ಭಾರತಿ. ಈ ಮಹಾಸಭೆಯನ್ನು ಪೊಲೀಸರು ತಡೆಯಬಹುದು ಎಂಬ ಭಯವಿತ್ತು. ಒಂದು ದೊಡ್ಡ ಮೆರವಣಿಗೆಯ ಅಧ್ಯಕ್ಷತೆಯನ್ನು ವಹಿಸಿ ಭಾರತಿ ಸಮುದ್ರತೀರಕ್ಕೆ ಬಂದರು. ಪೊಲೀಸ್ ಏನೂ ಮಾಡುವುದಕ್ಕಾಗಲಿಲ್ಲ.

ಈ ಸ್ವರಾಜ್ಯ ದಿನವನ್ನು ತುತ್ತುಕ್ಕುಡಿಯಲ್ಲೂ, ತಿರುನಲ್‌ವೇಲಿಯಲ್ಲೂ ಆಚರಿಸಲು ವ. ಉ. ಚಿದಂಬರಂ ಪಿಳ್ಳೈ ಮತ್ತು ಸುಬ್ರಹ್ಮಣ್ಯ ಶಿವಾ ಏರ್ಪಾಡು ಮಾಡಿದ್ದರು. ಅಧಿಕಾರಿಗಳು ಇದನ್ನು ತಡೆಯಲು ಈ ಇಬ್ಬರೂ ಮುಖಂಡರನ್ನೂ ಕೈದು ಮಾಡಿದರು. ಜನತೆ ಕೋಪಗೊಂಡು ದೊಡ್ಡ ಕ್ರಾಂತಿಯನ್ನು ಎಬ್ಬಿಸಿದರು. ಚಿದಂಬರಂ ಪಿಳ್ಳೈಯನ್ನೂ ಸುಬ್ರಹ್ಮಣ್ಯ ಶಿವಾನನ್ನೂ ಬಿಳಿಯರ ಕಲೆಕ್ಟರ್ ಆದ 'ವಿಂರ್ಝ್' ಬಾಯಿಗೆ ಬಂದಂತೆ ಬಯ್ದಾಡಿದ. ಚಿದಂಬರನೂ, ಶಿವನೂ ಅವನಿಗೆ ಸರಿಯಾದ ಉತ್ತರವನ್ನು ಕೊಟ್ಟರು.

ಇವರ ಸಂಭಾಷಣೆಗಳನ್ನು ಭಾರತಿ ಎರಡು ಉತ್ತಮ ಕವಿತೆಗಳನ್ನಾಗಿ ಹಾಡಿದ್ದಾರೆ.

"ದೇಶದಾದ್ಯಂತ ಸ್ವಾತಂತ್ರ್ಯದ ಅಭಿಲಾಷೆಗಳನ್ನು ಬಿತ್ತಿದೆ - ಕ್ರಾಂತಿಯ ಜ್ವಾಲೆಯನ್ನು ಪ್ರಜ್ವಲಿಸುವಂತೆ ಮಾಡಿದೆ ಹಿಂಸೆ ಕೊಟ್ಟು ಸೆರೆಮನೆಯೊಳಗೆ ತಳ್ಳುವೆ ಹಿಂಸೆಯಿಂದ ನಿನ್ನನ್ನು ಪೀಡಿಸುವೆ" ಎಂದು ಕಲೆಕ್ಟರ್ 'ವಿಂರ್ಝ್' ಭಯ ತೋರಿಸಿದ.



ಸುಬ್ರಹ್ಮಣ್ಯ ಶಿವಾ

"ಸ್ವದೇಶದಲ್ಲಿ ವಿದೇಶೀಯರಿಗೆ ಗುಲಾಮಗಿರಿ
ಮಾಡಿ ನಿದ್ದೆ ಮಾಡುವುದಿಲ್ಲ
-ಮತ್ತೆ ಭಯಪಡುವುದಿಲ್ಲ.
ಯಾವ ದೇಶದಲ್ಲಿ ಇಂತಹ ಅನೀತಿಗಳನ್ನು ಸ್ವಾಗತಿಸುವರೋ ?
ದೇವ ನೋಡುವನೋ ?
ಎಂದು ದೇಶಭಕ್ತರು ಉತ್ತರ ನೀಡುತ್ತಾರೆ. ಉದ್ದವಾದ ಗಾನ ಅನೇಕ ಛಂದಸ್ಸಿನಿಂದ ಕೂಡಿದೆ.

ಜಾತಿಮತಗಳನ್ನು ನೋಡಲಾರೆವು

ವಿಪಕ್ಷದ ರಾಜಕೀಯ ಮುಖಂಡರ ಮನಸ್ಸು ಸಹಾ ಭಾರತಿಯಾರ್‌ರವರ ದೇಶಭಕ್ತಿಗೀತೆಗಳನ್ನು ಕೇಳಿ ಕರಗಿಹೋಯಿತು.

ದೇಶದಲ್ಲಿ ಬಂಕಿಮ್‌ಚಂದ್ರರ "ವಂದೇಮಾತರಂ" ಅನ್ನು ಬಿಟ್ಟರೇ ದೇಶಭಕ್ತಿ ಗೀತೆಗಳು ಹೆಚ್ಚು ಇಲ್ಲದ ಕಾಲ ಅದು. ತಮಿಳಿನಲ್ಲಿ ಈ ಅಭಾವವನ್ನು ನೀಗಿಸಿ ಭಾರತಿಯಾರ್‌ರವರು ದೇಶಭಕ್ತಿ ಗೀತೆಗಳನ್ನು ರಚಿಸುವಂತೆ ಒಂದು ಬೇಡಿಕೆಯನ್ನು ಪತ್ರಿಕೆಯಲ್ಲಿ ಪ್ರಕಟಿಸಿದರು. ಸ್ವತಃ ವಂದೇ ಮಾತರಂ ಎಂಬ ಹಾಡನ್ನು ಇಂಪಾದ ತಮಿಳಿನಲ್ಲಿ ಅನುವಾದ ಮಾಡಿದರು. ಒಬ್ಬರೂ ದೇಶಭಕ್ತಿ ಗೀತೆಗಳನ್ನು ರಚಿಸಲು ಮುಂದೆ ಬರಲಿಲ್ಲ. ಈ ಅಭಾವವನ್ನು ನೀಗಿಸಲು ಹೆಚ್ಚು ದೇಶಭಕ್ತಿ ಗೀತೆಗಳನ್ನು ಸ್ವತಃ ಹಾಡಿದರು. ದೇಶಭಕ್ತಿ ಎಂದರೆ ಏನು ? ಎಂಬುದನ್ನು ಕ್ಷಣದಲ್ಲಿ ಸ್ಪಷ್ಟವಾಗಿ ವಿವರಿಸುವ ಅವರ ಹಾಡುಗಳು ಉತ್ತಮ ವಿಚಾರಗಳನ್ನು ಹೊರಪಡಿಸುವ ಉಚ್ಚಕೋಟಿ ಕವಿತೆಗಳಾಗಿ ಬೆಳಗುತ್ತಿವೆ.



"ವಂದೇ ಮಾತರಂ ಎನ್ನುವೆವು - ನಮ್ಮ ಭಾರತ ಮಾತೆಯನ್ನು ನಮಸ್ಕರಿಸುವೆವು" ಎಂದೂ "ಜಾತಿ ಮತಗಳ ಭೇದವನ್ನು ನೋಡಲಾರೆವು. ಈ ದೇಶದಲ್ಲಿ ಜನ್ಮ ಹೊಂದಿದರೆ ಉತ್ತಮ ಬ್ರಾಹ್ಮಣರಾದರೂ ಒಂದೇ - ಅಥವಾ ಬೇರೆ ಕುಲದವರಾದರೂ ಒಂದೇ" ಎಂದು ಸಮತ್ವದ ತತ್ವವನ್ನು

ವಾ.ವು. ಚಿದಂಬರಂ ಪಿಳ್ಳೈ.

ಬೋಧಿಸಿದರು. "ಭಾರತದಲ್ಲಿ ಹುಟ್ಟುವುದೇ ಉತ್ತಮವಾದ ಜನ್ಮ. ಇಲ್ಲಿ ಹುಟ್ಟಿದವರಿಗೆ ಮೇಲು-ಕೀಳೆಂಬ ಬೇಧ ಭಾವನೆ ಇಲ್ಲ" ಎಂದರು.


ಭಾರತದ ಹಿರಿಮೆಗಳನ್ನು ಯೋಚಿಸುವಂತೆ ಮಾಡಿದರು. "ಸುವರ್ಣ ಕಿರಣಗಳ ಪ್ರಕಾಶದ ಭಾರತ ದೇಶ ನಮ್ಮ ದೇಶ. ಇದರ ಗುಣಗಾನ ಮಾಡುವ - ಇದಕ್ಕೆ ಸರಿ ಸಮನಾದ ದೇಶ ಬೇರಾವುದೂ ಇಲ್ಲ" ಎಂದು ಹಾಡಿ ಭಾರತದ ಜನರನ್ನು ನೆಟ್ಟಗೆ ನಿಂತು ಹಿರಿಹಿರಿ ಹಿಗ್ಗುವಂತೆ ಮಾಡಿದರು. ಈ ದೇಶದಲ್ಲಿ ನಮಗಿರುವ ಹಕ್ಕುಗಳನ್ನು ಹೇಗೆ ಹೇಳಿದರು ಎಂಬುದು ಗೊತ್ತೆ ?

ನನ್ನ ತಂದೆಯೂ ತಾಯಿಯೂ ಸುಖದಿಂದ ಬಾಳಿ
ಇಂಪಾಗಿ ಇದ್ದ ದೇಶ ಈ ದೇಶ ಆದರ ಪೂರ್ವಿಕರು
ಸಾವಿರಾರು ವರ್ಷ ಬಾಳಿ ಬದುಕಿದ ದೇಶ ಈ ದೇಶ.

ಸಾವಿರಾರು ವರ್ಷಗಳು ನಮ್ಮವರು ಬಾಳಿದ ದೇಶ. ಅದು ನಮ್ಮದಲ್ಲದೆ ಬೇರೆಯವರ ಪಾಲಾಗುವುದು ಸಾಧ್ಯವೇ. ನಿನ್ನೆ ಬಂದ ವಿದೇಶಿಯರು ಇಲ್ಲಿ ಶಾಸನ ಮಾಡುವುದು ಸರಿಯೇ ?

ಸ್ವಾತಂತ್ರ್ಯ ಬಯಸುವುದು ತಪ್ಪಲ್ಲ. ಇಷ್ಟೆ ಅಲ್ಲ ಸ್ವಾತಂತ್ರ್ಯ ಬಯಸುವವರೂ ಬೇರೆ ಯಾವ ಲಕ್ಷ್ಯವನ್ನೂ ಬಯಸಲಾರರು, ಎಂದು ಕೃತ್ರಿಮ ಸ್ವಾತಂತ್ರ್ಯದಲ್ಲಿ ಮೈಮರೆತವರನ್ನು ಅಲ್ಲಗಳೆದರು.

ಭಾರತಿ ಅವರ ಗಂಟಲು ಕಂಚಿನ ಗಂಟಲಾಗಿತ್ತು. ಹಾಡುಗಳನ್ನು ಹಾಡುವಾಗ ಅವರು ಹಾಡಿನ ವಿಚಾರಗಳನ್ನು ಲಯವಾಗಿ ಭಾವುಕತೆ ಉಕ್ಕಿ ಬರುವಂತೆ ಹಾಡುತ್ತಿದ್ದರು. ಕೇಳುವವರು ಮೈಮರೆತು ಕೇಳುತ್ತಿದ್ದರು. ಭಾರತಿಗೆ ವಿರೋಧಿಯಾಗಿದ್ದ ರಾಜಕೀಯ ಪಕ್ಷದ ಮುಖಂಡರಾದ ವಿ. ಕೃಷ್ಣಸ್ವಾಮಿ ಅಯ್ಯರ್ ಭಾರತಿಯ ದೇಶಭಕ್ತಿ ಗೀತೆಗಳನ್ನು ಅವರ ಬಾಯಿಂದ ಕೇಳಿ ಪರವಶರಾದರು. ಅವರೇ ಮುಂದೆ ಬಂದು ಈ ಹಾಡುಗಳನ್ನು ಒಂದು ಪುಟ್ಟ ಸಂಗ್ರಹವಾಗಿ ಮೊಟ್ಟಮೊದಲು


வந்தே மாதரம்.

ஸ்வதேச கீதங்கள்

1907.

ವಿ. ಕೃಷ್ಣಸ್ವಾಮಿ ಐಯ್ಯರ್‌ರವರ ನೆರವಿನಿಂದ ಪ್ರಕಟವಾದ
ಭಾರತಿಯಾರ್ ಕವಿತೆಗಳ ಪುಟ್ಟ ಪುಸ್ತಕದ ಮುಖಪುಟ

ಪ್ರಕಟಿಸಲು ಸಹಾಯ ಮಾಡಿದರು. ಈ ಕಿರು ಪುಸ್ತಕವನ್ನು ಪ್ರತಿಯೊಂದು ಶಾಲೆಗೂ ಉಚಿತವಾಗಿ ಕಳುಹಿಸಿ ಈ ಹಾಡುಗಳನ್ನು ವಿದ್ಯಾರ್ಥಿಗಳು ಹಾಡುವಂತೆ ಮಾಡಿಸಿದವರು ಕೃಷ್ಣಸ್ವಾಮಿ ಐಯ್ಯರ್.

ಇಕ್ಕಟ್ಟು

1908ನೇ ಇಸವಿ ಭಾರತಿಯ ಜೀವನದಲ್ಲಿ ಮುಖ್ಯವಾದ ವರ್ಷ. ಆ ವರ್ಷದಲ್ಲಿ "ಸ್ವದೇಶ ಗೀತೆಗಳು" ಎಂಬ ಅವರ ಮೊಟ್ಟ ಮೊದಲನೆಯ ಕವಿತಾ ಸಂಗ್ರಹ ಹೊರಬಂದಿತು. ಅದಕ್ಕೆ ಎಲ್ಲೆಲ್ಲೂ ಪ್ರಶಂಸೆ ಸಿಕ್ಕಿತು.

ರಾಜಕೀಯದಲ್ಲೂ ಆ ವರ್ಷ ತೀವ್ರವದ ವರ್ಷ. ತಿಲಕರ ಪಕ್ಷದ ಪ್ರಚಾರದಿಂದ ಭಾರತದ ಪ್ರಜೆಗಳು ಭಯವನ್ನು ಬಿಟ್ಟು ಎಚ್ಚೆತ್ತುಕೊಂಡದ್ದನ್ನು ಕಂಡ ಬ್ರಿಟಿಷ್ ಶಾಸಕರು ತಿಲಕರ ಪಕ್ಷದ ಮುಖಂಡರುಗಳನ್ನು ಒಬ್ಬೊಬ್ಬರನ್ನಾಗಿ ಸೆರೆಮನೆಗೆ ನೂಕಿದರು. ತಿಲಕರನ್ನು ದೇಶದಿಂದ ಹೊರ ಹಾಕಿ ಬರ್ಮಾದಲ್ಲಿನ ಮಾಂಡ್ಲೆ ನಗರದ ಸೆರೆಮನೆಯಲ್ಲಿಟ್ಟರು. ಲಜಪತರಾಯ್ ಭಾರತವನ್ನು ಬಿಟ್ಟು ಅಮೇರಿಕಾಗೆ ಹೋದರು. ವ. ಉ. ವರದರಾಜನ್, ಚಿದಂಬರಂ ಪಿಳ್ಳೈ ಮತ್ತು ಶಿವಾ ಸೆರೆಮನೆಯಲ್ಲಿ ತೊಂದರೆಗಳನ್ನು ಅನುಭವಿಸಿದರು. ಮಾನ್ಯ ವಯೋವೃದ್ಧ ಪತ್ರಿಕೋದ್ಯಮಿಯಾದ ಜಿ. ಸುಬ್ರಹ್ಮಣ್ಯ ಅಯ್ಯರ್ ಸೆರೆಮನೆ ಸೇರಿದರು. ತಿಲಕರ ಸಿದ್ಧಾಂತವನ್ನು ಸಮರ್ಥಿಸಿದ ಪತ್ರಿಕೆಗಳ ಮೇಲೆ ರಾಜ ದ್ರೋಹವೆಂಬ ದೊಡ್ಡ ತಪ್ಪನ್ನು ಹೊರಿಸಿ ದಂಡನೆಗೆ ಒಳಪಡಿಸಿದರು. ಭಾರತಿಯಾರ್ ಸಂಪಾದಕರಾಗಿ ನಡೆಸಿದ ಇಂಡಿಯಾ ಪತ್ರಿಕೆಯ ಮೇಲೂ ಕ್ರಮವನ್ನು ಜಾರಿಗೆ ತಂದರು. ಆ ಪತ್ರಿಕೆಯಲ್ಲಿ ಹೊರಬಂದ ಎಂಟು ರಾಜಕೀಯ ಟಿಪ್ಪಣಿಗಳಿಗೂ, ಒಂದು ಭಾರತಿಯ ಕವಿತೆಗಾಗಿಯೂ ಪತ್ರಿಕೆಯ ಮುಖ್ಯ ಸಂಪಾದಕರಾದ ಎಂ. ಶ್ರೀಸಿವಾಸನ್‌ರವರ ಮೇಲೆ ರಾಜದ್ರೋಹದ ಆರೋಪ ಹೊರೆಸಿ ಅವರನ್ನು ಕೈದು ಮಾಡಲು ಆದೇಶ ನೀಡಿದರು.

ಕಾನೂನಿನ ಪ್ರಕಾರ ಸಂಪಾದಕರನ್ನು ಬಂಧಿಸುವ ಆದೇಶವನ್ನು ಹೊತ್ತ ಒಬ್ಬ ಪೊಲೀಸನು ಇಂಡಿಯಾ ಪತ್ರಿಕೆಯ ಕಾರ್ಯಾಲಯಕ್ಕೆ ಬಂದನು. ಆಗ ಸಂಜೆಯ ಸಮಯ. ಆಗ ಭಾರತಿ ಆ ದಿನದ ಕೆಲಸಗಳನ್ನು ಮುಗಿಸಿ ಮನೆಗೆ ಹೋಗಲು ಮಹಡಿಯ ಮೆಟ್ಟಲಿನಿಂದ ಇಳಿಯುತ್ತಿದ್ದರು. ಪೊಲೀಸನು ಬಂಧನದ ಆದೇಶ ಪತ್ರವನ್ನು ತೋರಿಸಿದ. ಅದರಲ್ಲಿ ಅವರ ಹೆಸರಿರಲಿಲ್ಲ. ಕಾನೂನಿನ ಪ್ರಕಾರ ಮುಖ್ಯ ಸಂಪಾದಕರ ಹೆಸರು ಮಾತ್ರ ಇತ್ತು.

"ಇದು ನನಗೆ ಅಲ್ಲ" ಎಂದು ಹೇಳಿ ಭಾರತಿ ಹೊರಟುಹೋದರು. ಕಾನೂನಿನ ಪ್ರಕಾರ ಮುಖ್ಯ ಸಂಪಾದಕರನ್ನು ಬಂಧಿಸಲು ಆದೇಶ ಬಂದ ಹಾಗೆಯೇ, ಮಾರನೆಯ ದಿವಸ ತನಗೂ ಬಂಧನ ಆದೇಶ ಬರಬಹುದು ಎಂಬುದನ್ನೂ ಭಾರತಿ ಅರಿತುಕೊಂಡರು. 'ಇಂಡಿಯಾ' ಪತ್ರಿಕೆಯಲ್ಲಿ ಅವರು ಬರೆದಂತಹ ಸಮಾಚಾರಗಳೇ ಬ್ರಿಟಿಷ್ ಶಾಸಕರ ಕೋಪವನ್ನು ಕೆರಳಿಸಿತ್ತು!

ಸಾಲದ್ದಕ್ಕೆ ಇಂಡಿಯಾ ಪತ್ರಿಕೆಯಲ್ಲಿ ಹೊರಬಂದ ಭಾರತಿಯ ಒಂದು ಹಾಡೂ ಸಹ

ರಾಜದ್ವೇಷವನ್ನೂ ರಾಜದ್ರೋಹವನ್ನೂ ಉಂಟುಮಾಡುವುದು ಎಂದು ಬರೆದಿದ್ದಾರಲ್ಲಾ! ಅದು ಯಾವ ಹಾಡೆಂದು ಗೊತ್ತೆ?

"ಯಾವಾಗ ಈ ಸ್ವಾತಂತ್ರ್ಯ ವಾದ ಅಡಗುವುದು?
ಯಾವಾಗ ಗುಲಾಮಗಿರಿಯ ಮೋಹ
ನಮ್ಮನ್ನು ಬಿಟ್ಟು ಅಡಗುವುದು?
ಯಾವಾಗ ನಮ್ಮ ಭಾರತಮಾತೆಯ
ಬೇಡಿಗಳು ನೀಗುವುದು?
ಯಾವಾಗ ನಮ್ಮ ಕಷ್ಟಗಳು ದೂರ ಅಗಲಿ
ನಿಜವಾದ ಸ್ವಾತಂತ್ರ್ಯ ದೊರಕುವುದು?"

ಎಂದು ಪ್ರಾರಂಭವಾಗುವ ಹಾಡು.

ಭಾರತಿ ತನ್ನ ಮಿತ್ರರೊಂದಿಗೆ ಮಂತ್ರಾಲೋಚನೆ ನಡೆಸಿದರು. ಅವರು ವ್ಯರ್ಥವಾಗಿ ಬಂಧನಕ್ಕೆ ಒಳಗಾಗುವದು ಪ್ರಯೋಜನವಿಲ್ಲ; ಅದಕ್ಕೆ ಬದಲಾಗಿ ಅವರು ಬಂಧನಕ್ಕೆ ಒಳಗಾಗದೆ ಎಲ್ಲಾದರೂ ತಪ್ಪಿಸಿಕೊಂಡು ಭದ್ರವಾದ ಒಂದು ಜಾಗಕ್ಕೆ ಹೋಗಿಬಿಟ್ಟರೆ ಇಂಡಿಯಾ ಪತ್ರಿಕೆಯನ್ನು ಅಲ್ಲಿಂದ ನಡೆಸಬಹುದು ಎಂದ ಮಿತ್ರರು ಸಲಹೆ ನಿಡಿದರು. ಹಾಗೆ ಭದ್ರವಾದ ಜಾಗ ಯಾವುದು? ಆ ಕಾಲದಲ್ಲಿ ಫ್ರೆಂಚ್ ಶಾಸನಕ್ಕೊಳಪಟ್ಟ ಪುದುಚ್ಚೇರಿಯೇ (ಪಾಂಡಿಚ್ಚೇರಿ) ಅಂತಹ ಸುರಕ್ಷಿತವಾದ ಸ್ಥಾನ ಎಂದು ನಿರ್ಧರಿಸಿದರು.

ಭಾರತಿಯವರಿಗೆ ಮದ್ರಾಸ್ ಪಟ್ಟಣವನ್ನು ಬಿಟ್ಟು ಹೋಗಲು ಹಿಡಿಸಲಿಲ್ಲ, ಹೌದು. ಆದರೂ ಮಿತ್ರರ ಸಲಹೆಯಂತೆ ಅವರು ತಮಗೆ ಹಿಂದು ಮುಂದು ಗೊತ್ತಿಲ್ಲದ ಪಾಂಡಿಚ್ಚೇರಿಗೆ ಹೋಗಲು ಸಮ್ಮತಿಸಿದರು. ಮದ್ರಾಸಿನ ಎಳುಂಬೂರ್ ಸ್ಟೇಷನ್‌ನಲ್ಲಿ ರೈಲು ಹತ್ತಿದರೆ ಸಿ.ಐ.ಡಿ. ಪೊಲೀಸ್‌ನವರು ನೋಡುವರು ಎಂದು ಚಿಕ್ಕ ಸ್ಟೇಷನ್ ಆದ ಸೈದಾ ಪೇಟೆಯಲ್ಲಿ ರೈಲು ಹತ್ತಿ ಪಾಂಡಿಚ್ಚೇರಿಗೆ ಭಾರತಿ ಹೊರಟು ಹೋದರು.

ಪುದುಚ್ಚೇರಿಯಲ್ಲಿ "ಇಂಡಿಯಾ"

ಪುದುಚ್ಚೇರಿಗೆ ಹೋದ ಹೊಸದರಲ್ಲಿ ಮಿತ್ರರು ಯಾರೂ ಇಲ್ಲದೆ ಹಲವಾರು ತೊಂದರೆಗಳಿಗೆ ಭಾರತಿ ಒಳಪಟ್ಟರು. ಅನಂತರವೇ ಕುವಳೈ ಕಣ್ಣನ್, ಸುಂದರೇಶಯ್ಯರ್ ಎಂಬ ಇಬ್ಬರು ಗಾಢಮಿತ್ರರು ಅವರಿಗೆ ಸಿಕ್ಕಿದರು. ಇವರು ಭಾರತಿಗೆ ಇರುವುದಕ್ಕೆ ಒಂದು ಒಳ್ಳೆಯ ಜಾಗವೊಂದನ್ನು ಏರ್ಪಾಡು ಮಾಡಿದರು. ಭಾರತಿ ಪುದುಚ್ಚೇರಿಯಲ್ಲಿದ್ದ ಹತ್ತು ವರ್ಷಗಳೂ ಈ ಇಬ್ಬರು ಮಿತ್ರರು ಒಳ್ಳೆಯ ಮಿತ್ರರಾಗಿ ಹಲವಾರು ಸಹಾಯಗಳನ್ನು ಮಾಡಿದರು.

ಭಾರತಿಯಾರ್ ಕೊನೆಯ ದಿವಸಗಳಲ್ಲಿ, 1921ನೆಯ ಇಸ್ವಿಯಲ್ಲಿ, ತಿರುವಳ್ಳಿಕ್ಕೇಣಿ ದೇವಸ್ಥಾನದ ಆನೆಯ ಮುಂದೆ ಪೆಟ್ಟು ತಿಂದು ಬಿದ್ದಾಗ ಉಳಿದವರು ಏನು ಮಾಡುವುದು ಎಂದು ಕಿಂಕರ್ತ ವ್ಯವಿ ಮೂಢರಾಗಿದ್ದಾಗ ಸ್ವಲ್ಪವೂ ಯೋಚನೆ ಮಾಡದೆ ತಟ್ಟನೆ ಹಾಯ್ದು ಭಾರತಿಯನ್ನು ಹೊರಗೆ ಎತ್ತಿಕೊಂಡು ಬಂದ ವೀರರು ಕುವಳೈಕಣ್ಣನ್ ಎಂಬುವರು. ಭಾರತಿಯ ಅಭಿಮಾನಕ್ಕೆ ಒಳಗಾದ ಶಿಷ್ಯರಲ್ಲಿ ಒಬ್ಬರಾಗಿದ್ದರು.

ಭಾರತಿ ಪುದುಚ್ಚೇರಿಗೆ ಬಂದ ನಂತರ ಕೆಲವು ವಾರಗಳಲ್ಲಿ ಅವರ ಮದ್ರಾಸ್ ಮಿತ್ರರಾದ ಮಿಂಡಯಂ ಶ್ರೀನಿವಾಸಚಾರ್ಯರ್ "ಇಂಡಿಯಾ"




ಕುವಳೈ ಕಣ್ಣನ್

ಅಚ್ಚಾಗಿ ಬಂದ ಅಚ್ಚುಯಂತ್ರವನ್ನು ಪುದುಚ್ಚೇರಿಯಲ್ಲಿರುವ ಒಬ್ಬರಿಗೆ ಮಾರಿಬಿಟ್ಟಂತೆ ನಟಿಸಿ ಅಚ್ಚು ಆಫೀಸನ್ನು ಪುದುಚ್ಚೇರಿಗೆ ತಂದುಬಿಟ್ಟರು.

ಕೆಲವು ವಾರಗಳು ಹೊರಬಾರದೇ ಇದ್ದ "ಇಂಡಿಯಾ" ಪುದುಚ್ಚೇರಿಯಿಂದ ಹೊಸ ಮೆರುಗಿನಿಂದ ಪ್ರಕಟವಾಗಲು ಪ್ರಾರಂಭಿಸಿತು. ಹಿಂದಿನ ಹಾಗೆಯೇ ಪತ್ರಿಕೆಯ ಮುಖಪುಟದಲ್ಲಿ ರಾಜಕೀಯ ಕಾರ್ಟೂನು, ಚಿತ್ರ, ಒಳಗೆ ಹೆಚ್ಚು ರಾಜಕೀಯ ವಿಷಯಗಳೂ ಹೊರಬಂದವು. ಪುದುಚ್ಚೇರಿ ಫ್ರೆಂಚ್ ಶಾಸನಕ್ಕೆ ಒಳಗಾದ ಪ್ರದೇಶವಾದ್ದರಿಂದ ಬ್ರಿಟಿಷರನ್ನು ಮತ್ತೆ ಹೆಚ್ಚು ಬಿಸಿಬಿಸಿಯಾಗಿ ಖಂಡಿಸಿ ಬರೆಯಲು ಸಾಧ್ಯ ಆಯಿತು.

ಪುದುಚ್ಚೇರಿಯಿಂದ ಬ್ರಿಟಿಷ್ ಇಂಡಿಯಾ ಪ್ರದೇಶದಲ್ಲಿ ಚಂದಾದಾರರಾಗಿದ್ದವರಿಗೆ ಟಪಾಲು ಮೂಲಕ "ಇಂಡಿಯಾ" ವನ್ನು ಕಳುಹಿಸಿಕೊಟ್ಟರು. ಅದರಂತೆಯೇ ಬ್ರಿಟಿಷ್ "ಇಂಡಿಯಾ"ದಲ್ಲಿ ಜಾಹೀರಾತುಗಳನ್ನು ಮುಂದುವರೆಸಿದರು.

"ಇಂಡಿಯಾ" ಪುದುಚ್ಚೇರಿಯಲ್ಲಿದ್ದಾಗ ಅರವಿಂದ ಘೋಷ್ ಅಲಿಪುರ್ ಮೊಕದ್ದಮೆಯಲ್ಲಿ ಬಿಡುಗಡೆ ಹೊಂದಿದರು. ಅದನ್ನು ಸ್ವಾಗತಿಸುತ್ತಾ ಅರವಿಂದರ್ ಎಂಬ ಚಂದ್ರನನ್ನು ನುಂಗಲು ಬಂದ ರಾಹು (ಹಾವು) ಅವರನ್ನು ಬಿಟ್ಟು ಹೋದಂತೆ ಪ್ರಕಟಿಸಿದರು.



1909ರಲ್ಲಿ ಅರವಿಂದರು ಸೆರೆಮನೆಯಿಂದ ಹೊರಬಂದಾಗ ಇಂಡಿಯಾ ಪತ್ರಿಕೆಯಲ್ಲಿ ಪ್ರಕಟವಾದ ಕಾರ್ಟೂನು

ಗಾಂಧೀಯೆಂಬ ಹಸು

ದಕ್ಷಿಣ ಆಫ್ರಿಕಾದಲ್ಲೂ, ಫಿಜಿಯಲ್ಲೂ ಮತ್ತೆ ಕಣ್ಣಿಗೆ ಕಾಣಿಸದ ಅನೇಕ ದೇಶಗಳಲ್ಲಿ ಭಾರತೀಯರು ಪಡುತ್ತಿರುವ ಕಷ್ಟಗಳನ್ನು ಕೇಳಿ ಭಾರತಿ ಬಹಳ ನೊಂದುಕೊಂಡರು. ಆ ದೇಶಗಳ ಸಂಪತ್ತನ್ನು ಹೆಚ್ಚಿಸುವುದಕ್ಕೆ ಶ್ರಮದಿಂದ ದುಡಿದ ಭಾರತೀಯರು ಗೌರವವಿಲ್ಲದೆ, ತಕ್ಕ ವರಮಾನವಿಲ್ಲದೆ ಬಾಳುತ್ತಿರುವುದನ್ನು ಅವರು ಹಲವಾರು ಟಿಪ್ಪಣಿಗಳ ಮೂಲಕ ಅರ್ಥವಾಗುವಂತೆ ಮಾಡಿದರು.

ಆ ಕಾಲದಲ್ಲಿ ದಕ್ಷಿಣ ಆಫ್ರಿಕಾದಲ್ಲಿರುವ ಭಾರತೀಯ ಹಕ್ಕುಗಳಿಗಾಗಿ ಬ್ಯಾರಿಸ್ಟರ್ ಎಂ.ಕೆ. ಗಾಂಧೀ (ಮಹಾತ್ಮಾ ಗಾಂಧೀ) ಎಂಬ ಯುವಕರು ಸತ್ಯ, ಅಹಿಂಸೆ, ಧರ್ಮಗಳ ಮೂಲಕ ಹೋರಾಡಿ ಬರುತ್ತಿರುವುದನ್ನು ಪ್ರಶಂಸಿಸಿ ಭಾರತಿ ಬರೆದರು.

ಇಂಡಿಯಾ ಪತ್ರಿಕಯಲ್ಲಿ ಪ್ರಕಟವಾದ ಇನ್ನೆರೆಡು ಕಾರ್ಟೂನುಗಳು. ಬಲಗಡೆ ಇರುವ ಕಾರ್ಟೂನು (ನರಿ ಮತ್ತು ಕಾಗೆ) ಮಿಂಟೋ ಮಾರ್ಲೆ ಸುಧಾರಣೆಗೆ ಸಂಬಂಧಿಸಿದ್ದು. ಕರ್ಜನ್ ನರಿ ಮಾರ್ಲೆ ಕಾಗೆಯನ್ನು ಕಂಡು "ಹಾಡನ್ನು ಹೇಳು" ಎನ್ನುತ್ತಿದೆ. ಎಡಗಡೆಯ ಕಾರ್ಟೂನಿನಲ್ಲಿ ರಾಷ್ಟ್ರೀಯ ಚಳುವಳಿ ಮುಖಂಡರು ದಮನ ನೀತಿ ಕಾನೂನುಗಳ ಮೂಲಕ ಬಂಧಿತರಾಗಿರುವುದನ್ನು ಚಿತ್ರಿಸಲಾಗಿದೆ.





ದಕ್ಷಿಣ ಆಫ್ರಿಕದ ಭಾರತೀಯರ ಹೋರಾಟಕ್ಕೆ ನಿಧಿ ಸಂಗ್ರಹಿಸಿ ಕಳುಹಿಸಿಕೊಟ್ಟರು. ಬ್ಯಾರಿಸ್ಟರ್ ಗಾಂಧೀಯ "ಸತ್ಯಾಗ್ರಹ" ಎಂಬ ಹೊಸ ಹೋರಾಟದ ಪದ್ಧತಿ ಭಾರತಿಯನ್ನು ಹೆಚ್ಚು ಆಕರ್ಷಿಸಿತು.

1909ರಲ್ಲಿ ಬ್ಯಾರಿಸ್ಟರ್ ಗಾಂಧೀ ದಕ್ಷಿಣ ಆಫ್ರಿಕದ ಭಾರತೀಯರ ಪಕ್ಷ ವಹಿಸಿ ಲಂಡನ್‌ಗೆ ಹೋಗಿ ಅಲ್ಲಿ ಬ್ರಿಟಿಷ್ ಸರ್ಕಾರಕ್ಕೆ ಭಾರತೀಯರ ಕಷ್ಟಗಳನ್ನು ವಿವರಿಸಿದರು. ದಕ್ಷಿಣ ಆಫ್ರಿಕೆಗೆ ಹಿಂದಿರುಗಿದರೆ ಬಂಧಿಸಲ್ಪಡುವರು ಎಂದು ಗೊತ್ತಿದ್ದು ಅವರು ಕಡ್ಡಾಯವಾಗಿ ದಕ್ಷಿಣ ಆಫ್ರಿಕೆಗೆ ಹಿಂದಿರುಗಿದರು. ಅಲ್ಲಿದ್ದ ಬಿಳಿಯರ ಶಾಸನ ಅವರನ್ನು ಬಂಧಿಸಿ ಸೆರೆಮನೆಯಲ್ಲಿಟ್ಟಿತು.

ಇದನ್ನು ಭಾರತಿ ಒಂದು ಕಾರ್ಟೂನು ಮೂಲಕ ವಿವರಿಸಿದರು. ಗಾಂಧೀಯನ್ನು ಒಂದು ಹಸುವಾಗಿಯೂ ಅವರು ಬಂಧಿಸಿ ಬಿಳಿಯರ ಶಾಸನವನ್ನು ಹಸುವಿನ ಮೇಲೆ ಹಾಯುವ ಹುಲಿಯನ್ನಾಗಿ ಚಿತ್ರಿಸಿದರು.

ಆ ಚಿತ್ರಕ್ಕೆ ಅವರು ತಂದ ವಿವರಣೆ ಬಹಳ ಸ್ವಾರಸ್ಯವಾಗಿದೆ. ಚಿತ್ರದ ವಿವರಣೆ ಕೆಳಗಿನಂತಿದೆ:-

ಹಿಂದಿನ ಕಾಲದಲ್ಲಿ ಹಿಂದೂ ಪುರಾಣದಲ್ಲಿ ಹೇಳಲ್ಪಟ್ಟಿರುವ ಈ ಕಥೆ ಅನೇಕರಿಗೆ ಗೊತ್ತಿರಬಹುದು. ಒಂದು ಕಾಡಿನಲ್ಲಿ ಹುಲಿಯ ಬಾಯಿಗಿ ಸಿಕ್ಕಿದ ಹಸು ತನ್ನ ಕರುವಿಗೆ ಹಾಲನ್ನು ಕೊಡದೆ ಬಂದ ಕಾರಣದಿಂದ ಹುಲಿಯನ್ನು ನೋಡಿ ಹೀಗೆ ಹೇಳಿತು, "ಹೇ ಪ್ರಭೊ ! ಇಂದು ನಾನು ನನ್ನ ಕರ್ತವ್ಯವನ್ನು ಮುಗಿಸದೇ ಬಂದು ಬಿಟ್ಟಿದ್ದೇನೆ. ನನ್ನ ಕಂದನಿಗೆ ಹಾಲು ಕೊಟ್ಟಿಲ್ಲ. ಆದುದರಿಂದ ನಾನು ಈಗಲೇ ಹೋಗಿ ಹಾಲನ್ನು ಕೊಟ್ಟು ಬಂದ ನಂತರ ನಿನ್ನ ಆಹಾರವಾಗುತ್ತೇನೆ. ದಯಮಾಡಿಸಬೇಕು."

ಹುಲಿ ಬಹಳ ಹೊತ್ತು ಯೋಚನೆ ಮಾಡಿ ಅದರ ಸತ್ಯವನ್ನು ಪರೀಕ್ಷಿಸಲು "ನಿನ್ನ ಕೆಲಸ ಮುಗಿದ ನಂತರ ಕೂಡಲೇ ಬಂದುಬಿಡು" ಎಂದು ಹೇಳಿ ಕಳುಹಿಸಿತು.

ಮತ್ತೆ ಹಸು ಕರುವಿಗೆ ಹಾಲನ್ನು ಕೊಟ್ಟು ತನ್ನ ಕಂದನನ್ನು ತನ್ನ ಸ್ನೇಹಿತೆಯಾದ ಒಂದು ಹಸುವಿನ ಬಳಿ ಒಪ್ಪಿಸಿ ಹುಲಿಯ ಬಳಿ ಬಂದು, "ಎನ್ನೊಡೆಯ ! ಕೆಲಸವನ್ನು ಮುಗಿಸಿ ಬರುವಂತೆ ಆದೇಶ ತಂದ ನಿಮಗೆ ವಂದಿಸುತ್ತೇನೆ. ನನ್ನನ್ನು ಈಗ ತಿನ್ನಬಹುದು" ಎಂದಿತು.

ಇದನ್ನು ಕಂಡ ಹುಲಿ ಬೆರಗಾಗಿ "ಅಮ್ಮಾ ಸತ್ಯವತಿ ನಿನ್ನನ್ನು ತಿಂದು ನಾನು ಯಾವ ದುರ್ಗತಿಗೆ ಒಳಗಾಗಬೇಕು ! ನಾನು ಇದುವರೆಗೂ ಮಾಡಿದ ಪಾಪ ಸಾಕು !" ಎಂದು ಹೇಳಿ ಆಹಾರ ಗ್ರಹಿಸದೇ ಪ್ರಾಣವನ್ನು ಬಿಟ್ಟಿತು.

ಈ ಹಸುವಿನ ಹಾಗೆ ನಡೆದ ನಮ್ಮ ಶ್ರೀ ಗಾಂಧೀ ಪ್ರಭುಗಳನ್ನು ದಕ್ಷಿಣ ಆಫ್ರಿಕದ ಹುಲಿಗಳು ಏನು ಮಾಡುತ್ತಿವೆಯೆಂದು ನೋಡಿದಿರಾ ? ಏನೂ ಅರಿಯದ ಹುಲಿ ಸಹಾ ಭಾರತದಲ್ಲಿ ದಯೆಯ ಪ್ರವಾಹವನ್ನು ನಿರೋಧಿಸಲಾಗಲಿಲ್ಲ, ಆದರೆ ದಕ್ಷಿಣ ಆಫ್ರಿಕದಲ್ಲಿರುವ ಮನುಷ್ಯ ರೂಪವನ್ನು ತಾಳಿರುವ ಹುಲಿ ನೋಡುವುದಕ್ಕೆ ಎಷ್ಟು ಕಠೋರವಾಗಿದೆ. (ತಮಗೆ ಸಹಾಯ ಮಾಡಿದ) ಭಾರತೀಯರನ್ನು ಹಿಂಸಿಸುವ ನಾಗರಿಕ ಆಂಗ್ಲೇಯರನ್ನು ಈ ಕಲಿಕಾಲದಲ್ಲಿ ಮಾತ್ರ ಕಾಣಬಹುದು.

1905ರಿಂದಲೇ ಭಾರತಿಗೆ ಅಹಿಂಸೆ, ಸಾತ್ವಿಕ ಹೋರಾಟದಲ್ಲಿ ನಂಬಿಕೆ ಇತ್ತು. ಕೆಲವು ತೀವ್ರ ದೇಶಭಕ್ತ ಯುವಕರು ಕೈ ಬಾಂಬುಗಳನ್ನು ಹಾಕಿ, ಆಂಗ್ಲೇಯರನ್ನು ಸುಟ್ಟು ಕೊಂದು, ದೇಶಕ್ಕೆ ಬಿಡುಗಡೆಯನ್ನು ಕೊಡಬಹುದು ಎಂದು ನೆನೆದ ಕಾಲದಲ್ಲಿ ಇಂತಹ ದಾರಿಗಳು ಭಾರತದ ಸಂಸ್ಕೃತಿಗೆ ವಿರೋಧವಾದದ್ದು ಎಂದು ಖಂಡಿಸಿದರು ಭಾರತಿ.

ಮದ್ರಾಸಿನಲ್ಲಿ ಮಾಡಿದ ವಿಮಾನ

ಇದೇ ಸಮಯದಲ್ಲಿ ಮದ್ರಾಸಿನಲ್ಲಿ ಟಾಂಜಲಿಸ್ ಎಂಬ ಒಬ್ಬ ಫ್ರೆಂಚ್ ದೇಶದವರು ಸ್ವತಃ ಒಂದು ವಿಮಾನವನ್ನು ಮಾಡಿ ಪಲ್ಲಾವರದಲ್ಲಿ ಪ್ರಾಯೋಗಿಕವಾಗಿ ಬಿಟ್ಟು ತೋರಿಸಿದರು. ಮತ್ತೆ ಮದ್ರಾಸ್ ಪಟ್ಟಣದ ಐಲ್ಯಾಂಡ್ ಗ್ರೌಂಡ್ಸ್ ಎಂಬ ದ್ವೀಪದಲ್ಲಿ ಗೌರ್ನರ್ ಮುಂದೆ ಜನಸಾಮಾನ್ಯರಿಗೆ ಹಾರಿಸಿ ತೋರಿಸಿದರು.

ಗಾಂಧೀಯೆಂಬ ಹಸು: ಗಾಂಧೀಯವರ ದಕ್ಷಿಣ ಆಫ್ರಿಕದ ಹೋರಾಟವನ್ನು ಚಿತ್ರಿಸುವ ಕಾರ್ಟೂನು
- ಇಂಡಿಯಾ 18.12.1909.




ಅಮೇರಿಕಾದಲ್ಲಿ ರೈಟ್ ಸಹೋದರರು ಪ್ರಪಂಚದ ಮೊಟ್ಟಮೊದಲನೆಯ ವಿಮಾನವನ್ನು ಹಾರಿಸಿ ತೋರಿಸಿದ ಮೂರೂವರೆ ವರ್ಷದೊಳಗೆ ಇದು ಮಾಡಲ್ಪಟ್ಟಿತು. ಮದ್ರಾಸ್ ವಿಮಾನ ! ಪಿಳೇರಿಯೊ ಎಂಬ ಫ್ರೆಂಚ್ ದೇಶದವರು ತಾವೇ ಒಂದು ವಿಮಾನವನ್ನು ತಯಾರಿಸಿ ಇಂಗ್ಲಿಷ್ ಕೊಲ್ಲಿಯನ್ನು ದಾಟಿ, ಹಾರಿಸಿ ತೋರಿಸಿದರು. ಇದರಿಂದ ಪ್ರೇರಣೆಗೊಂಡ ಮದ್ರಾಸಿನಲ್ಲಿರುವ ಫ್ರಾನ್ಸ್ ದೇಶದ ಟಾಂಜಲಿಸ್ ಎಂಬುವರು ಇಲ್ಲಿ ಆಕಾಶದಲ್ಲಿ ಹಾರಿ ಜಯಗಳಿಸಿದರು. ಮದ್ರಾಸ್ ಪತ್ರಿಕೆಗಳಲ್ಲಿ ಇದರ ಸುದ್ದಿ ಮತ್ತು ವಿಮಾನದ ಚಿತ್ರ ಬಂದಿತು.

ಈ ಸುದ್ದಿಯನ್ನೂ ವಿಮಾನದ ಚಿತ್ರವನ್ನೂ ತಮ್ಮ 'ಇಂಡಿಯಾ' ದಲ್ಲಿ ಪ್ರಕಟಿಸಿದ ಭಾರತಿಯಾರ್ ವಿಮಾನವನ್ನು ಮಾಡಲು ಯೋಚಿಸಿದವರು ಫ್ರೆಂಚ್ ದೇಶದವರಾದರೂ ಅದನ್ನು ಸಿಂಸನ್ ಕಂಪನಿಯ ಕಾರ್ಯಾಗಾರದಲ್ಲಿ ಮಾಡಿವದರು ತಮಿಳರೆ ಎಂದು ಹೆಮ್ಮೆಪಟ್ಟರು.

ಕಾವ್ಯದ ಅರಳುವಿಕೆ

ಬ್ರಿಟಿಷ್ ಇಂಡಿಯಾ ಪ್ರದೇಶದಲ್ಲಿರುವ ಓದುಗರನ್ನೂ ಜಾಹೀರಾತುದಾರರನ್ನೂ ನಂಬಿ ಭಾರತಿಯ 'ಇಂಡಿಯಾ' ಪತ್ರಿಕೆ ಮತ್ತೆ ಮತ್ತೆ ಶಕ್ತಿಯುತವಾಗಿ ಬೆಳೆಯಿತು. ಅದರ ಜಯಭೇರಿ ಮದ್ರಾಸಿನ ಬ್ರಿಟಿಷ್ ಶಾಸಕರಿಗೆ ಹಿಡಿಸಲಿಲ್ಲ. 'ಇಂಡಿಯಾ' ಪತ್ರಿಕೆ, ಕರ್ಮಯೋಗಿ, ವಿಜಯ, ಸೂರ್ಯೋದಯ ಮುಂತಾದ ಪತ್ರಿಕೆಗಳನ್ನು ಭಾರತಿ ಸಂಪಾದಕರಾಗಿ ನಡೆಸುತ್ತಿದ್ದರು. ಈ ಪತ್ರಿಕೆಗಳನ್ನು ಪುದುಚ್ಚೇರಿಯಿಂದ ಬ್ರಿಟಿಷ್ ಇಂಡಿಯಾಗೆ ಬರುವುದನ್ನು ತಡೆ ಮಾಡಿದರು. ಟಪಾಲಿನ ಮೂಲಕ ಮದ್ರಾಸಿಗೆ ಬಂದ ಈ ಪತ್ರಿಕೆಗಳನ್ನು ಪೊಲೀಸರ ಮೂಲಕ

ಪದುಚ್ಚೇರಿಯಲ್ಲಿ ಭಾರತಿ ಮೊದಲು ವಾಸ ಮಾಡಿದ ಮನೆ



ವಶಪಡಿಸಿಕೊಂಡು, ಅವು ಸುಡಲ್ಪಟ್ಟವು. ಬೇರೆ ದಾರಿಯಿಲ್ಲದೆ ಈ ಪತ್ರಿಕೆಗಳೆಲ್ಲವೂ 1910ರ ಮಾರ್ಚ್ ತಿಂಗಳಲ್ಲಿ ನಿಂತುಹೋದವು.

ಭಾರತಿಗೆ ಹೆಚ್ಚು ಬರೆಯಬೇಕೆಂಬ ಆಸೆ, ಆದರೆ ಅವುಗಳನ್ನು ಪ್ರಕಾಶಿಸಲು ಪತ್ರಿಕೆಗಳೇ ಇಲ್ಲ. ಈ ಸ್ಥಿತಿಯಲ್ಲಿ ಅವರು ಕವಿತಾ ಗ್ರಂಥಗಳನ್ನು ಬರೆಯತೊಡಗಿದರು.

1912ನೇ ಇಸ್ವಿಯಲ್ಲಿ ಭಾರತಿಯವರು ಮೂರು ದೊಡ್ಡ ಕವಿತಾ ಸಂಗ್ರಹಗಳನ್ನೂ ಒಂದು ಅನುವಾದ ಗ್ರಂಥವನ್ನೂ ಬರೆದು ಮುಗಿಸಿದರು. ಪ್ರತಿಯೊಂದೂ ಮುತ್ತಿನಂತಹ ಸಾಹಿತ್ಯವಾಗಿ ಪ್ರಖ್ಯಾತಿಯನ್ನು ಪಡೆಯಿತು. ''ಪಾಂಚಾಲಿ ಶಪಥಂ'' ಎಂಬ ಒಂದು ಕಂಡಕಾವ್ಯ, 'ಕುಯಿಲ್ ಪಾಟ್ಟು' ಎಂಬ ಒಂದು ಕಲ್ಪನಾ ಕಾವ್ಯ 'ಕಣ್ಣನ್ ಪಾಟ್ಟು' ಎಂಬ ಭಕ್ತಿ ಕಾವ್ಯ, ಭಗವದ್ಗೀತೆಯ ತಮಿಳು ಅನುವಾದ - ಹೀಗೆ ಈ ನಾಲ್ಕು ಅದ್ಭುತ ಕಾವ್ಯ ಗ್ರಂಥಗಳನ್ನು ಒಂದೇ ವರ್ಷದಲ್ಲಿ ಬರೆದು ಮುಗಿಸಿದರು.

ಆದರೆ ಇಂತಹ ಅಪೂರ್ವ ಗ್ರಂಥಗಳನ್ನು ಪ್ರಕಾಶಿಸುವವರೇ ಇರಲಿಲ್ಲ.

ಪಾಂಚಾಲಿ ಶಪಥಂ

ಭಾರತಿ ತಮ್ಮ ಎಲ್ಲ ಕಾವ್ಯಗಳಲ್ಲೂ ಉತ್ತಮವಾದ ಕಾವ್ಯ ಪಾಂಚಾಲಿ ಶಪಥಂ ಎಂದು ನೆನೆದರು. ಅದರಲ್ಲಿ ದ್ರೌಪದಿಯ ಕಥೆ ಹೇಳಲ್ಪಟ್ಟಿದೆ ಎಂದರೂ, ಪ್ರತಿ ಪಂಕ್ತಿಯಲ್ಲೂ ಭಾರತಿಯ ದೇಶಭಕ್ತಿಯ ಆವೇಶ, ಉತ್ತಮ ಶಾಸನದ ಲಕ್ಷಣಗಳು, ಮಕ್ಕಳ ದಕ್ಷತೆ, ಅನೀತಿಯನ್ನು ಖಂಡಿಸಿ ಕ್ರಾಂತಿಯನ್ನು ಎಬ್ಬಿಸುವ ವೀರಾವೇಶದ ವಚನಗಳು ಮತ್ತು ಅಚಲ ದೈವಭಕ್ತಿಯಿಂದ ಕೂಡಿ ಮೆರುಗುಗೊಂಡಿದೆ.

'ಪಾಂಚಾಲಿ ಶಪಥಂ' ಸರಳ ಶೈಲಿಯಲ್ಲಿ ಎಲ್ಲರೂ ಬಯಸಿ ಓದುವಂತಹ ಛಂದಸ್ಸಿನಲ್ಲಿ ಬರೆಯಲ್ಪಟ್ಟಿದೆ. ಭಾರತಿ ಗ್ರಂಥದ ಮುನ್ನುಡಿಯಲ್ಲಿ ಕೆಳಕಂಡಂತೆ ಹೇಳುತ್ತಾರೆ.

''ಸರಳ ಶಬ್ದಗಳು, ಸರಳ ಶೈಲಿ, ಕ್ಷಣದಲ್ಲಿ ಅರಿತುಕೊಳ್ಳಬಲ್ಲ ಛಂದಸ್ಸು, ಸಾಮಾನ್ಯ ಜನರು ಬಯಸುವ ರಾಗಗಳು ಹೊಂದಿರುವ ಕಾವ್ಯವೊಂದು ಈಗ ರಚಿಸಿಕೊಡುವವನು, ನಮ್ಮ ಮಾತೃಭಾಷೆಗೆ ಹೊಸಜೀವ ತರುವವನಂತಾಗಿದ್ದಾನೆ.''

ತಮಿಳು ಭಾಷೆಗೆ ಒಂದು ಹೊಸ ಶುದ್ಧ ಕಾವ್ಯವನ್ನು ಬರೆದು ಕೊಡುವುದಲ್ಲದೆ, ದೇಶದ ಬಿಡುಗಡೆಗೆ ಉತ್ಸಾಹ ತುಂಬುವ ಒಂದು ಹೊಸ ಬುಗ್ಗೆಯಂತೆ ಈ ಕಾವ್ಯವನ್ನು ರಚಿಸಿದ್ದಾರೆ.

ದುಷ್ಟರಿಂದ ಪೀಡಿಸಲ್ಪಟ್ಟ ದ್ರೌಪದಿ, ಬಂದಿಸಲ್ಪಟ್ಟ ಭಾರತ ಮಾತೆಯಂತೆ ಈ ಕಾವ್ಯದಲ್ಲಿ ಕಾಣಿಸುತ್ತಾಳೆ. ಕೆಡುಕನ್ನು ತಡೆಮಾಡದ ಜನರನ್ನು ನಪುಂಸಕರೆಂದು, ಕೌರವಸಭೆಯಲ್ಲಿ ದ್ರೌಪದಿಯನ್ನು ಬರಮಾಡಿಸಿಕೊಂಡ ಸಮಯದಲ್ಲಿ ಮೌನವನ್ನು ಸಾಧಿಸಿದ ವಯೋವೃದ್ಧರನ್ನು ''ದೆವ್ವ ಶಾಸನ ಮಾಡಿದಾಗ ಹೆಣವನ್ನು ತಿನ್ನುವ ಶಾಸ್ತ್ರಗಳು'' ಎಂದು ಕವಿ ವ್ಯಂಗ್ಯ ಬಾಣಗಳನ್ನು ಬಿಡುತ್ತಾರೆ.

ಭಾರತಯವರ ಬರವಣಗೆ (1)

ದೇಶದ ಜನರ ಹಕ್ಕುಗಳನ್ನು ಮನದಟ್ಟು ಮಾಡದ ರಾಜರನ್ನು ಅವರು ಖಂಡಿಸುವುದು ನೋಡತಕ್ಕಂಥಹ ವಿಷಯವಾಗಿದೆ. ಧರ್ಮರಾಜ (ಯುಧಿಷ್ಠಿರ) ದೇಶವನ್ನು ಹಣಕ್ಕೆ ಇಟ್ಟು ಕಳೆದುಕೊಂಡದ್ದನ್ನು ಭಾರತಿ ಹೀಗೆ ಬಣ್ಣಿಸುತ್ತಾರೆ:

ದೇಶದ ಜನರೆಲ್ಲಾ - ತಮ್ಮಂತೆಯೆ
ನರರೆಂದು ಭಾವಿಸದವರು;
ಕುರಿಯ ಹಿಂಡು ನಾವೆಂದು - ಲೋಕವನ್ನು
ರಾಜನು ಗಣಿಸಿಬಿಟ್ಟ !

ಭಾರತಿಯವರ ಬರವಣಿಗೆ (2)

ಅಷ್ಟೇ ಅಲ್ಲ ಭಾರತಿ ಮತ್ತೆ ಹೇಳುತ್ತಾರೆ:

ದೇವಸ್ಥಾನದಲ್ಲಿ ಪೂಜೆ ಮಾಡುವವರು - ಶಿಲೆಯನ್ನು
ಕೊಂಡೊಯ್ದು ಮಾರುವಂತೆ;
ದ್ವಾರಪಾಲಕನೊಬ್ಬ - ಮನೆಯನ್ನು
ಪಣದಲ್ಲಿಟ್ಟು ಕಳೆದುಕೊಂಡಂತೆ
ಸಾವಿರಾರು - ನೀತಿಗಳನ್ನು ಅರಿತ ಧರ್ಮರಾಜ
ತನ್ನನ್ನೂ ಇಟ್ಟು ಕಳೆದುಕೊಂಡ - ಛೀ, ಛೀ
ತುಚ್ಛ ಮನುಷ್ಯರಂತೆ ಕೆಲಸ ಮಾಡಿಬಿಟ್ಟ !

“ಛೀ ! ಛೀ !” ಎಂಬ ಪದದಲ್ಲಿ ಎಷ್ಟೊಂದು ಕೋಪ, ತಾತ್ಸಾರ ಹೊರಪಟ್ಟಿವೆ !

ಯಾವುದನ್ನು ಬರೆದರೂ ಓದುಗರಿಗೆ ಒಂದು ಹೊಸ ನಂಬಿಕೆ ಹುಟ್ಟುವಂತೆ ಬರೆಯುವುದು ಭಾರತಿಯ ಬರವಣಿಗೆಯ ವೈಶಿಷ್ಟ್ಯಗಳಲ್ಲಿ ಒಂದು. ಎಂಥಹ ಇಕ್ಕಟ್ಟಾದ ಪರಿಸ್ಥಿತಿಯಲ್ಲೂ ಮನಸೋಲ್ಲುವಂತೆ ಅದನ್ನು ಮುಗಿಸುವುದಿಲ್ಲ. 'ಪಾಂಚಾಲಿ ಶಪಥ'ದಲ್ಲಿ ಧರ್ಮರಾಜನು ಎಲ್ಲವನ್ನೂ ಕಳೆದುಕೊಂಡು, ದ್ರೌಪದಿಯನ್ನು ಕಳೆದುಕೊಂಡ ಸಮಯದಲ್ಲೂ, ಅರ್ಜುನನ ಮೂಲಕ ಬರುವ ವಚನವನ್ನು ನೋಡಿ -

"ಧರ್ಮದ ಜೀವನವನ್ನು ಷಡ್ಯಂತ್ರವು ಕಬಳಿಸುವುದು;
ಸತ್ಯಧರ್ಮವೇ ಮತ್ತೆ ಗೆಲ್ಲುವುದು; ಸ್ವಾಭಾವಿಕ
ಧರ್ಮವನ್ನು ನಮ್ಮಿಂದಲೇ ಲೋಕ ಕಲಿಯುವುದು
ದಾರಿ ಹುಡುಕಿ ವಿಧಿ ಈ ಕೆಲಸವನ್ನು ಮೂಡಿಸಿತು;
ಕರ್ಮವನ್ನು ಮತ್ತೆ ಮತ್ತೆ ಕಾಣುವೆವು. ಇಂದು
ಬಂಧಸಕ್ಕೊಳಪಟ್ಟೆವು. ತಾಳ್ಮೆಯಿಂದ ಇರೋಣ. ಕಾಲ ಬದಲಾಗುವುದು;
ಧರ್ಮಕ್ಕೆ ಆಗ ಜಯ ಬರುವುದನ್ನು ಕಾಣುವೆವು.
ಆಗ ಗಾಂಡೀವ ಧನಸ್ಸು ಉಂಟು. ಅದರ ಸಹಾಯದಿಂದ ಕಾಣುವೆವು".

ಕುಯಿಲ್ ಪಾಟ್ಟು

'ಕುಯಿಲ್ ಪಾಟ್ಟು' (ಕೋಗಿಲೆಯ ಹಾಡು) ಕಲ್ಪನಾ ವಿಲಾಸದಿಂದ ತುಂಬಿದ ಉತ್ತಮ ಹಾಸ್ಯ ರಸಭರಿತ ಹೊಸ ಕವಿತೆ. ಇದರಲ್ಲಿ ಹೆಣ್ಣು ಕೋಗಿಲೆ ಒಂದು ಮಂಗನ ಹತ್ತಿರವೂ ಎತ್ತಿನ ಹತ್ತಿರವೂ ಒಂದಾದ ನಂತರ ಪ್ರೇಮದ ಮಾತುಗಳನ್ನು ಮಾತನಾಡುತ್ತದೆ. ಓದುತ್ತ, ಓದುತ್ತ ತಡೆಯಲಾರದ ನಗು ಬರುತ್ತದೆ.

"ಪ್ರೇ ಪ್ರೇಮ ಪ್ರೇಮ
ಪ್ರೇಮ ಹೋದರೆ
ಪ್ರೇಮ ಹೋದರೆ
ಮರಣ ಮರಣ ಮರಣ"

ಎಂದು ಕವಿಯ ಹತ್ತಿರ ಪ್ರೇಮ ತೋರಿಸಿದ ಆ ಮೋಸದ ಹೆಣ್ಣು ಕೋಗಿಲೆ, ಮಂಗನ ಹತ್ತಿರ ಪ್ರೇಮದ ಮಾತನಾಡುವಾಗ ಮನುಷ್ಯರನ್ನು ಅಲ್ಲಗಳೆದು ಕೋತಿಯನ್ನು ಹೊಗಳುವುದನ್ನು ಕೇಳಿರಿ.

ಆದಷ್ಟು ಅವರು ಪ್ರಯತ್ನಿಸಿ ನೋಡಿದರು
ರೇಷ್ಮೆ ಕೂದಲಿನಿಂದ ಮುಚ್ಚಲ್ಪಡದ ತಮ್ಮ ಶರೀರವನ್ನು
ಎಂಟು ವಸ್ತ್ರದಿಂದ ಮುಚ್ಚಿ ನಮ್ಮ ಮುಂದೆ ಬಂದರೂ,
ಮೀಸೆ ದಾಡಿಯನ್ನು ಬೆಳೆಸಿ, ವಿಚಿತ್ರ ಅಲಂಕಾರದಿಂದ ಬಂದರೂ
ಮಾನವನ ಸುಂದರ ಮುಖದಂತೆ ಮಾಡಲು ಪ್ರಯತ್ನಪಟ್ಟರು

ಆಡುತ್ತ ನೆಗೆಯುವ ಸೌಂದರ್ಯದ ಮುಂದೆ ಅವರು ನಿಲ್ಲಲು ಸಾಧ್ಯವೆ ?
ಗುಂಪು ಸೇರಿ ಕುಡಿಯುತ್ತ ಹಾರಿದರೂ, ಗೋಪುರದ ಮೇಲೆ
ಏರಲು ಗೊತ್ತಿಲ್ಲದೆ ಏಣಿಯ ಮೂಲಕ ಹತ್ತಿದರೂ
ಬೇರೆ ಯಾವುದನ್ನೂ ಮಾಡಿದರೂ ಬೇಗನೆ ಜಿಗಿಯುವುದರಲ್ಲಿ
ವಾನರರಂತೆ ಆಗಲು ಸಾಧ್ಯವೋ ? ಬಾಲಕ್ಕೆ ಎಲ್ಲಿ ಹೋಗುವರು ?

ಪ್ರಾಕೃತಿಕ ಸೌಂದರ್ಯವನ್ನು ಬಣ್ಣಿಸುವುದರಲ್ಲಿ ಭಾರತಿಗೆ ಸರಿಸಮಾನರು ಯಾರೂ ಇಲ್ಲ ಎಂಬುದು ಈ ಹಾಡಿನಿಂದ ಚೆನ್ನಾಗಿ ಗೊತ್ತಾಗುತ್ತದೆ.

ಭಾರತಿಯವರು 'ಕುಯಿಲ್ ಪಾಟ್ಟು' ಎಂಬ ಕವಿತೆಯನ್ನು ಈ ತೋಟದಲ್ಲಿ ಬರೆದರು.



''ಕಣ್ಣನ್ ಪಾಟ್ಟು''

ಭಾರತ ದೆ ಶದ ಇಷ್ಟದೇವರು ಕೃಷ್ಣ ಎಂಬುದು ಭಾರತಿಯ ಅಭಿಪ್ರಾಯ. ಕೃಷ್ಣನನ್ನು ಬಡವರು ಹಾಡಿ ಪೂಜಿಸುವ ರೀತಿಯಲ್ಲಿ ಅವರು ಬರೆದ ಪುಟ್ಟ ಕಾವ್ಯ ಅಥವಾ ಕವಿತೆಗಳ ಸಂಗ್ರಹವೇ 'ಕಣ್ಣನ್ ಪಾಟ್ಟು' (ಕೃಷ್ಣನ ಹಾಡು). ಕಣ್ಣನ್ ಪಾಟ್ಟು ಎಂಬ ಈ ಕಾವ್ಯ ಸಂಗ್ರಹದಲ್ಲಿ ಕೃಷ್ಣನನ್ನು ಜೀವನವನ್ನು ಅರಳಿಸುವ ಮಗುವಾಗಿಯೂ, ಕೆಡುಕನ್ನು ತೊಡೆದುಹಾಕುವ ದೊಡ್ಡ ರಾಜನಾಗಿಯೂ, ಯುದ್ಧ ಭೂಮಿಯಲ್ಲಿ ಎದುರಾಳಿಗಳನ್ನು ಅಳಿಸುವ ಮಹಾವೀರನಾಗಿಯೂ, ಯುದ್ಧ ಭೂಮಿಯಲ್ಲಿ ವಿಚಲಿತ ಮನಸ್ಸಿನ ದುಃಖವನ್ನು ನೀಗಿಸುವ ಜ್ಞಾನಿಯಾಗಿಯೂ ಬಣ್ಣಿಸುವುದಲ್ಲದೇ ಕೃಷ್ಣನನ್ನು ಮಿತ್ರನಾಗಿಯೂ ಶಿಷ್ಯನಾಗಿಯೂ ಪ್ರೇಮಿಯಾಗಿಯೂ ತನ್ನ ಪ್ರಿಯತಮೆಯಾಗಿಯೂ ಬಣ್ಣಿಸುತ್ತಾರೆ.

ದೇವರನ್ನು ಪುರುಷನಾಗಿಯೂ ಹಾಡುವವರು ಸ್ತ್ರೀಯಾಗಿಯೂ ಹಾಡುವ ರೂಢಿ ಭಾರತದಲ್ಲಿದೆ. ಇದನ್ನು ನಾಯಕ, ನಾಯಕಿ ಭಾವ ಎಂದು ಹೇಳುವರು. ಈ ಹಳೆಯ ಸಂಪ್ರದಾಯವನ್ನು ಮೀರಿ ಕೃಷ್ಣನನ್ನು ಪ್ರಿಯತಮೆಯಾಗಿ ಹಾಡಿ ಒಂದು ಹೊಸ ರೀತಿಯನ್ನು, ಸಂಪ್ರದಾಯವನ್ನು ಕಂಡರು ಭಾರತಿ.

ಭಾರತಿಯ ಕೃಷ್ಣ, ಜೀವಂತ ಶಬ್ದ ಚಿತ್ರ.

''ಯಾವಾಗಲೂ ಎಡೆಬಿಡದೆ ಆಡುವಂತಹ ಮಗು - ಕೃಷ್ಣ ರಸ್ತೆಯಲ್ಲಿ ಹಂಗಸರಿಗೆ ಎಡೆಯಲ್ಲದ ಕಾವ'' ಎಂದು ಹಾಡುವಾಗಲೂ

''ಪುಟಾಣಿ ಗಿಳಿಯೇ - ಕಣ್ಣಮ್ಮ

ಸಂಪತ್ತಿನ ಆಗರವೇ'' ಎಂದು ಹಾಡುವಾಗಲೂ ಕೃಷ್ಣ ನಮ್ಮ ಕಣ್ಣ ಮುಂದೆ ಬಂದು ನಿಲ್ಲುತ್ತಾನೆ.

''ಕೃಷ್ಣ ನನ್ನ ಸೇವಕ'' ಎಂದು ಹಾಡುವ ಹಾಡಲ್ಲಿ ಸೇವಕರಿಂದ ಉಂಟಾಗುವ ದುಃಖವನ್ನು ಹಾಸ್ಯರಸ ಹರಿಯುವಂತೆ ಬಣ್ಣಿಸುತ್ತಾರೆ. ''ಕೃಷ್ಣನನ್ನು ಶಿಷ್ಯ'' ಎಂಬ ಹಾಡಿನಲ್ಲಿ ಶಿಷ್ಯ ಕಾಡುವುದನ್ನು ಅದರ ಮೂಲಕ ಕವಿ ಜ್ಞಾನ ಹೊಂದುವುದನ್ನೂ ಹಾಡುತ್ತಾರೆ ಭಾರತಿ.

.ಕೃಷ್ಣ ರಾಜನಾಗಿ ಬಂದು ನಮ್ಮನ್ನು ಕಾಯುತ್ತಾನೆ. ತಾಯಾಗಿ ಬಂದು ಭೂಮಿಯಲ್ಲಿ ಇರುವ ಸಂಪತ್ತನ್ನು ನಮಗೆ ಕೊಡುತ್ತಾನೆ. ಉತ್ತಮ ಗುರುವಾಗಿ ಬಂದು ಸುಳ್ಳು ಶಾಸ್ತ್ರಗಳನ್ನು ಹೊರಹಾಕಿ ಹೊಸಬಾಳನ್ನು ಕೊಡುತ್ತಾನೆ.

ಪ್ರಿಯತಮನಾಗಿ ಬರುವ ಕೃಷ್ಣ, ಪ್ರಿಯತಮೆಯ ಬಳಿ ಮಾಯ ಮಾಡಿ ಆಟ ಆಡುತ್ತಾನೆ. ಕಾಡಿನಲ್ಲಿ ಕೃಷ್ಣನನ್ನು ಹುಡುಕಿ ಬರುವ ಪ್ರಿಯತಮೆಯ ಬಳಿ ಕ್ರೂರ ಬೇಟೆಗಾರನಂತೆ ಬಂದು ಅವಳನ್ನು ಕಾಡಿಸಿ ಪೀಡಿಸಿ, ಅನಂತರ ತನ್ನ ನಿಜರೂಪ ತೋರಿಸಿ ಸುಖ ಕೊಡುತ್ತಾನೆ.

ಮತ್ತೊಂದು ಹಾಡಿನಲ್ಲಿ ಕೃಷ್ಣನ ಪ್ರಿಯತಮೆ, ''ಪ್ರೀತಿಯ ಮುಖ ಮರೆತು ಹೋಯಿತು ಇದನ್ನು ಯಾರ ಹತ್ತಿರ ಹೇಳುವೆ ಸಖಿ'' ಎಂದು ವಿರಹ ವೇದನೆಯನ್ನು ಪ್ರಕಟಿಸುತ್ತಾಳೆ. ಮನಸ್ಸನ್ನು ಕರಗಿಸುವಂತಹ ಗಾನ.

ಹೊಸ ರೀತಿಯಲ್ಲಿ ಕೃಷ್ಣನು ಪ್ರಿಯತಮೆಯಾಗಿ ಹಾಡುವ ಹಾಡಿನಲ್ಲಿ ಉತ್ತಮ ಭಕ್ತಿರಸ ಕಂಡುಬರುತ್ತದೆ.

"ಪ್ರವಹಿಸುವ ಪ್ರಕಾಶ ಕಿರಣ ನೀನು ನನಗೆ
ನೋಡುವ ದೃಷ್ಟಿ ನಾನು ನಿನಗೆ"

ಎಂದು ಪ್ರಾರಂಭವಾಗುವ ಹಾಡು ಅತ್ಯಂತ ಪ್ರಸಿದ್ಧ ಹಾಡಾಗಿದೆ.

ಕವಿತೆಯ ಉತ್ತಮ ಗುಣಗಳಲ್ಲದೇ ಹಾಡುವುದಕ್ಕೆ ತಕ್ಕ ರಾಗಗಳೂ ಕೂಡಿದೆ. "ಕಣ್ಣನ್ ಪಾಟ್ಟು" ಇಂದು ತಮಿಳು ದೇಶದಲ್ಲಿ ಮನೆಮನೆಯ ಹಾಡಾಗಿದೆ. ಕೇಳದ ದಿನವಿಲ್ಲ; ಹಾಡದ ಜಾಗವಿಲ್ಲ.

ಮಾತೆ ಪರಾಶಕ್ತಿ

1910ನೇ ಇಸವಿಯ ಪ್ರಾರಂಭದಲ್ಲಿ ಅರವಿಂದರು ಪುದುಚ್ಚೇರಿಗೆ ಬಂದಾಗ ತಂಗಲು ಭಾರತಿ ಅವರಿಗೆ ಸಹಾಯ ಮಾಡಿದರು. ಮತ್ತೆ ಆರು ತಿಂಗಳಲ್ಲಿ ಕ್ರಾಂತಿ ವೀರರು, ವ.ವೇ.ಸು. ಅಯ್ಯರ್ ಲಂಡನ್‌ನಿಂದ ಪುದುಚ್ಚೇರಿಗೆ ಬಂದು ಸೇರಿದರು. ಅರವಿಂದರು ವಿದೇಶಿ ಸಾಹಿತ್ಯವನ್ನೂ ಭಾರತದ ಸಾಹಿತ್ಯವನ್ನೂ ಕಲಿತು ಯೋಗ ಮಾರ್ಗದಲ್ಲಿ ನಡೆದುಬಂದ ಜ್ಞಾನಿ. ವ.ವೇ.ಸು. ಅಯ್ಯರ್‌ರವರೂ ಅಂತಹದೇ ಆಳವಾದ ಸಾಹಿತ್ಯಜ್ಞಾನ ಪಡೆದವರು. ಇಬ್ಬರೂ ಕ್ರಾಂತಿ ಮಾರ್ಗದಲ್ಲಿ ಮನಸ್ಸನ್ನು ಕೊಟ್ಟವರು. ಮಾತೃಭೂಮಿಯ ಬಿಡುಗಡೆಗೆ ಪರಿಪೂರ್ಣವಾಗಿ ದುಡಿದವರು. ಇವರ ಜೊತೆ ಸಾಹಿತ್ಯ ಚರ್ಚೆಯಲ್ಲಿ ಮತ್ತು ಮನೋರಂಜನೆ ಮಾತುಕತೆ ನಡೆಸುವುದರಲ್ಲಿ ಭಾರತಿ ತಮ್ಮ ಬಡತನವನ್ನು ಮರೆತಿದ್ದರು.


ಈ ಕಾಲದಲ್ಲಿ ಭಾರತಿಗೆ ಮಾತೆ ಪರಾಶಕ್ತಿಯಲ್ಲಿ ಹೆಚ್ಚು ಆಸಕ್ತಿಯುಂಟಾಯಿತು.

ಪರಾಶಕ್ತಿ ಉಪಾಸನೆ ಎಂಬುದು ದೇವರನ್ನು ಸ್ತ್ರೀ ರೂಪದಲ್ಲಿ ಉಪಾಸನೆ ಮಾಡುವ ಪದ್ಧತಿ. ಭಾರತದಲ್ಲಿ ಪರಂಪರೆಯಾಗಿ ಹಿಂದಿನ ಕಾಲದಿಂದ ಬಂದ ಒಂದು ಉಪಾಸನಾ ಪದ್ಧತಿ.

ಐದನೆಯ ವರ್ಷದಲ್ಲೇ ತಾಯಿಯನ್ನು ಕಳೆದುಕೊಂಡ ಭಾರತಿ ಹೆಣ್ಣಿನ ಬಗ್ಗೆ ಒಂದು ವಿಶಿಷ್ಟ ಆದರ ಬೆಳೆಸಿಕೊಂಡಿದ್ದರು. ಅಮ್ಮಾ ಎಂಬ ಶಬ್ದವೇ ಅವರನ್ನು ಭಾವುಕತೆಗೆ ಕರೆದೊಯ್ಯುತ್ತಿತ್ತು.

ತಾಯನ್ನು ಕಳೆದುಕೊಂಡ ಭಾರತಿ ಅವರ ಚಿಕ್ಕಮ್ಮನ ಪ್ರೀತಿಗೆ ಪಾತ್ರರಾದರು. ಮತ್ತೆ ತಂದೆಯನ್ನು ಕಳೆದುಕೊಂಡು ಕಾಶಿಪಟ್ಟಣಕ್ಕೆ ಬಂದು ನೆಲೆಸಿದಾಗ ಅವರ ಅತ್ತೆ ಅವರನ್ನು ಪ್ರೀತಿಯಿಂದ ಕಂಡಳು. ಎಟ್ಟೆಯ ಪುರದಲ್ಲಿ ಬಾಲಕ ಭಾರತಿ ಶಾಲೆಗೆ ಹೋಗುವಾಗ ಸ್ಲೇಟು ಪುಸ್ತಕವನ್ನು ಎಲ್ಲಾದರೂ ಇಟ್ಟು, ಮರೆತು, ಕೊಳದ ಬಳಿಯಲ್ಲೋ, ತೋಟದಲ್ಲೋ ಪ್ರಾಕೃತಿಕ ಸೌಂದರ್ಯವನ್ನು ಸವಿಯುತ್ತಾ ತನ್ನನ್ನು ಮರೆತು ಬಿಡುತ್ತಿದ್ದ. ಅಂತಹ ಸಮಯದಲ್ಲಿ ಅವನ ತಂದೆ ಅವನನ್ನು ಬಯ್ಯದಂತೆ ಚಿಕ್ಕಮ್ಮ ಸಹಾಯ ಮಾಡುತ್ತಿದ್ದಳು.

ಕಾಶಿಯಲ್ಲಿ ಯುವಕ ಭಾರತಿ ಹೊಸ ಆಚಾರ-ವಿಚಾರ ಉಡುಪು ಮತ್ತು ಭಾವನೆಗಳಲ್ಲಿ



ಶ್ರೀ ಅರವಿಂದರು

ಲಯವಾದಾಗ ಅವನ ಮಾವ ಅವನನ್ನು ದುರಾಚಾರಿ ಎಂದು ದೂರವಿಟ್ಟಾಗೆಲ್ಲಾ, ಅವನ ಅತ್ತೆ ಅವನ ಪಕ್ಷವನ್ನು ವಹಿಸಿ ಸಹಾಯ ಮಾಡುತ್ತಿದ್ದಳು.

ಕಾಶಿಯಿಂದ ದಕ್ಷಿಣಕ್ಕೆ ಬಂದು ಮದ್ರಾಸಿನಲ್ಲಿ ಕೆಲಸ ನೋಡುತ್ತಿದ್ದ ಭಾರತಿಗೆ ಕಲ್ಕತ್ತಾದಲ್ಲಿ ವಿವೇಕಾನಂದರ ಶಿಷ್ಯೆ ನಿವೇದಿತಾ ದೇವಿಯವರ ಆಶೀರ್ವಾದ ದೊರಕಿತು. ಮನಸ್ಸಿನಲ್ಲಿ ಶಾಂತಿ ಹೊಂದಿದ ಭಾರತಿ ನಿವೇದಿತಾ ದೇವಿಯನ್ನು ತಮ್ಮ ಗುರುವಾಗಿ ಒಪ್ಪಿಕೊಂಡರು. ಸ್ತ್ರೀ ಸ್ವಾತಂತ್ರ್ಯದಲ್ಲಿ ಉತ್ಸಾಹ ತೋರಿಸಿದರು.

ಇಷ್ಟೊಂದು ಹೆಣ್ಣು ಮಕ್ಕಳ ಆಶೀರ್ವಾದವಿದ್ದರೂ, ತಾಯಿ ಇಲ್ಲದ ಕೊರತೆ ಭಾರತೀಯ ಮನಸ್ಸಿನಲ್ಲಿ ಚುಚ್ಚುತ್ತಿತ್ತು. ಬಹುಶಃ ಅದರಿಂದಲೇ ಅವರು ಪ್ರಪಂಚಕ್ಕೆ ನಾಯಕಿಯಾಗಿರುವ ಪರಾಶಕ್ತಿಯ ಬಗ್ಗೆ ಹೇರಳವಾದ ಹಾಡುಗಳನ್ನು ಹಾಡಿದ್ದಾರೆ. ಪರಾಶಕ್ತಿಯ ಹಲವಾರು ರೂಪಗಳಾದ ಕಾಳಿ, ಮಾರಿ, ಉಮಾ, ಲಕ್ಷ್ಮೀ, ಸರಸ್ವತಿ ಮುಂತಾದ ಹೆಣ್ಣು ದೇವರುಗಳ ಬಗ್ಗೆ ಅವರು ಹಾಡಿರುವ ಹಾಡುಗಳು ರೂಢಿಯಲ್ಲಿರುವ ಸ್ತೋತ್ರ ಹಾಡುಗಳಷ್ಟೇ ಅಲ್ಲದೆ, ಹೊಸ ಹೊಸ ನವೀನ ವಿಚಾರಗಳನ್ನು ಕೊಡುವ ಭಾವುಕತೆಯನ್ನು ಕೆರಳಿಸುವ ಸ್ತೋತ್ರಗಳಾಗಿ ಉಳಿದಿವೆ.

ಸಾಧಾರಣ ಮಾರಿಯಮ್ಮನ ಹಾಡಿನಲ್ಲೂ ಕೂಡಾ ಅವರು "ಬಟ್ಟೆಯನ್ನು ಒಗೆಯಲು ಮಣ್ಣುಂಟು, ಚರ್ಮವನ್ನು ಶುದ್ಧೀಕರಿಸಲು ಬೂದಿಯುಂಟು, ಕಂಚು ಗಂಟೆಯನ್ನು ಶುದ್ಧೀಕರಿಸಲು ಸಾಣೆಕಲ್ಲುಂಟು. ಆದರೆ ಮನಸ್ಸನ್ನು ಶುದ್ಧೀಕರಿಸಲು ದಾರಿಯಿಲ್ಲವಲ್ಲ" ಎಂದು ಹಾಡುವಾಗ ವಿಚಾರಗಳ ತೀವ್ರತೆ ನಮ್ಮ ಕಣ್ಣುಗಳಲ್ಲಿ ನೀರು ಹರಿಯುವಂತೆ ಮಾಡುತ್ತದೆ.

"ಓಂ ಶಕ್ತಿ, ಶಕ್ತಿ ಎಂದು ಹೇಳು - ಕೆಟ್ಟ
ಮನಸ್ಸಿನ ಚಾಂಚಲ್ಯವನ್ನು ಕೊಂದು ಹಾಕು"

ಎಂದು ಹೇಳುವಾಗ ಭಾರತಿಯಂತೆಯೇ ನಮ್ಮ ಮನಸ್ಸಿನ ಚಾಂಚಲ್ಯವೂ ನೀಗುತ್ತದೆ.

"ಉತ್ತಮ ವೀಣೆಯನ್ನು ಮಾಡಿ - ಅದನ್ನು
ಕಸದಲ್ಲಿ ಎಸೆದು ಕೆಡಿಸುವರೊ ?
ಹೇಳೇ ತಾಯಿ ಶಿವಶಕ್ತಿ! - ನನ್ನನ್ನು
ಪ್ರಕಾಶಿಸುವ ಜ್ಞಾನದೊಂದಿಗೆ ಹಡೆದು ಬಿಟ್ಟೆ
ನನಗೆ ಶಕ್ತಿಯನ್ನು ಕೊಡು - ಈ
ಜಗತ್ತಿನಲ್ಲಿ ಜೀವನವನ್ನು ಸಾರ್ಥಕ ಮಾಡಿ ಬಾಳುವುದಕ್ಕೆ
ಹೇಳು ತಾಯೇ ಶಿವಶಕ್ತಿ! - ಈ ನೆಲದ ಮೇಲೆ
ಭಾರವಾಗಿ ಬಾಳಲು ಮಾಡುವೆಯೇನು ?

ಎಂದು ಮತ್ತೊಂದು ಹಾಡಿನಲ್ಲಿ ಕವಿ ಹೇಳುತ್ತಾರೆ. ನಮ್ಮ ಭಕ್ತಿ ಸ್ವಾರ್ಥದಿಂದ ಕೂಡಿರುವುದು. ನಮ್ಮ ಸ್ವಾರ್ಥಕ್ಕಾಗಿ ಭಕ್ತಿಯಲ್ಲ. ಈ ಪ್ರಪಂಚವೇ ಇದನ್ನು ಉಪಯೋಗಿಸಿ ಪ್ರಗತಿ ಹೊಂದುವುದೇ ನಮ್ಮ ಅಭಿಲಾಷೆ ಎಂದು ಭಕ್ತಿ ಹಾಡುಗಳಲ್ಲಿ ನಿಸ್ವಾರ್ಥ ಪ್ರೇಮವನ್ನು ಭಾರತಿ ತೋರಿಸುತ್ತಾರೆ.

ಭಕ್ತಿ ಹಾಡುಗಳಲ್ಲೂ, ತತ್ವದ ಹಾಡುಗಳಲ್ಲೂ ಅಲ್ಲದೇ ಸರಳವಾದ ಮಕ್ಕಳ ಹಾಡುಗಳಲ್ಲೂ ಭಾರತಿ ಖ್ಯಾತಿಯನ್ನು ಪಡೆದರು.

"ಓಡಿ ಆಟವಾಡು ಮಗಳೆ! - ನೀನು
ಸೋಮಾರಿ ಆಗದಿರು ಮಗಳೆ
ಜತೆ ಸೇರಿ ಆಟವಾಡು ಮಗಳೆ! - ಒಬ್ಬ
ಮಗುವನ್ನೂ ಬಯ್ಯದಿರು ಮಗಳೆ"

ಎಂದು ಪ್ರಾರಂಭವಾಗುವ 'ಪಾಪಾ' ಹಾಡಿನಲ್ಲಿ ಮಕ್ಕಳು ಸ್ವಾಭಾವಿಕವಾಗಿ ಓಡಿ ನಲಿದಾಡಿ ಸುಖದಿಂದಿರಲು ಪ್ರೇರೇಪಿಸುವುದಲ್ಲದೆ, ಎಲ್ಲರೂ ಸೇರಿ ಜಗಳವಿಲ್ಲದೆ ಕೂಡಿ ಆಟವಾಡಬೇಕು ಎಂಬ ಐಕ್ಯತೆಯ ಭಾವನೆಯನ್ನು ಭಾರತಿ ಬೆಳೆಸುತ್ತಾರೆ.

ಸಮಾಜದಲ್ಲಿ ಕಂಡು ಬರುವ ಬಡವ, ಹಣವಂತ, ಉತ್ತಮ ಜಾತಿ, ಕೀಳು ಜಾತಿ ಮುಂತಾದ ಮೂರ್ಖ ವಿಭಜನೆಗಳನ್ನು ಖಂಡಿಸಿ ಭಾರತಿ ಈ ಹಾಡನ್ನು ಹಾಡಿದ್ದಾರೆ.

ಪ್ರಪಂಚದಲ್ಲಿರುವ ಎಲ್ಲರನ್ನೂ ಒಂದೆಂದು ಭಾವಿಸಿದರು, ಕವಿ. ಪ್ರಪಂಚದ ಎಲ್ಲಾ ಕಸುಬುಗಳೂ ಪರಾಶಕ್ತಿ ಮಾತೆಯ ಕಸಬುಗಳೇ ಎಂದು ಪ್ರಶಂಸಿಸಿದರು.

"ಸೋಮಾರಿತನವನ್ನು ಹೋಗಲಾಡಿಸುವ ಮಾನಸಿಕ ಸ್ಥಿತಿಯೇ ಶಕ್ತಿ. ಶಬ್ದದಲ್ಲಿ ಅಡಗಿರುವ ಜ್ಞಾನದ ಪ್ರಕಾಶವೇ ಶಕ್ತಿ!" ಎಂದು ಹೇಳುವ ಒಂದು ಹಾಡಿನಲ್ಲಿ, "ನಮ್ಮ ಮುಂದೆ ನಿಂತಿರುವ ಕಸುಬೇ ಶಕ್ತಿ" ಎಂದು ಕೆಲಸವನ್ನೇ ದೇವರೆಂದು ಹಾಡಿದ್ದಾರೆ, ಭಾರತಿ. ಮತ್ತೊಂದು ಹಾಡಿನಲ್ಲಿ "ಪ್ರಪಂಚದ ಎಲ್ಲ ಕೆಲಸಗಳನ್ನೂ ಸಂತೋಷದಿಂದ ಮಾಡೋಣ" ಎಂದೂ "ರಸ್ತೆಯನ್ನು ಗುಡಿಸುವ ಶಾಸ್ತ್ರವನ್ನು ಕಲಿಯೋಣ" ಎಂದೂ ಸಮರ್ಥಿಸುತ್ತಾರೆ.

ಭಾರತಿಯ ಹಾಡುಗಳು ಹೆಚ್ಚು ಜನಸಾಮಾನ್ಯರ ಬಾಯಲ್ಲಿ ಮೊಳಗುವ ಸರಳ ಛಂದಸ್ಸಿನಲ್ಲೂ, ಸರಳ ರಾಗಗಳಲ್ಲೂ ಬರೆಯಲ್ಪಟ್ಟಿವೆ. ಆವರ ಹಾಡುಗಳು ಬರೀ ಪುಸ್ತಕದ ಹಾಳೆಗಳಲ್ಲಿ ಅವಿತುಕೊಳ್ಳದೆ, ಮಕ್ಕಳ ಬಾಯಲ್ಲಿ ಮೊಳಗಿ ಮಾನವ ಸಮಾಜವನ್ನೇ ಬದಲಾಯಿಸಬೇಕೆಂಬುದು ಕವಿ ಭಾರತಿಯ ಉದ್ದೇಶ ಆಗಿತ್ತು.



ಗುಪ್ತಚಾರರ ಕಾಟ

1911ನೇ ಇಸವಿಯಲ್ಲಿ ದಕ್ಷಿಣ ಮಣಿಯಾಚ್ಚಿ ಎಂಬ ರೇಲ್ವೆ ನಿಲ್ದಾಣದಲ್ಲಿ 'ವಾಂಚಿ' ಎಂಬ ಯುವಕ 'ಆಶ್' ಎಂಬ ಜಿಲ್ಲೆ ಕಲೆಕ್ಟರನನ್ನು ಸುಟ್ಟು ಹಾಕಿ ತಾನೂ ಸುಟ್ಟುಕೊಂಡು ಸತ್ತ. ಈ ಘಟನೆ ಎಲ್ಲೆಲ್ಲೂ ಭಯಮಿಶ್ರಿತ ಕುತೂಹಲವನ್ನು ಕೆರಳಿಸಿತು. ಮೊದಲು ತೂತ್ತುಕ್ಕುಡಿಯಲ್ಲಿ ಅಕ್ರಮವಾಗಿ ನಡೆದುಕೊಂಡ ಆಶ್‌ನನ್ನು ಕೊಲ್ಲುವುದಕ್ಕೆ ಪುದುಚ್ಚೇರಿಯಲ್ಲಿ ಷಡ್ಯಂತ್ರ ಮಾಡಿದರೆಂದು ಸರ್ಕಾರ ನೆನೆದಿತ್ತು. ಆದುದರಿಂದ ಭಾರತಿಯ ಜೊತೆ ಪುದುಚ್ಚೇರಿ ದೇಶಭಕ್ತರೆಲ್ಲರೂ ಬ್ರಿಟಿಷ್ ಪೊಲೀಸರಿಂದ ಹೆಚ್ಚು ಕಾಟಕ್ಕೆ ಒಳಪಟ್ಟರು.

ಇನ್ನೂರು ಜನ ಮದ್ರಾಸ್ ಪೊಲೀಸ್ ಪಡೆಯೊಂದು ಪುದುಚ್ಚೇರಿ ಎಲ್ಲೆಯಲ್ಲಿ ಕ್ಯಾಂಪ್ ಹಾಕಿತು. ಭಾರತಿ, ಅಯ್ಯರ್, ಶ್ರೀನಿವಾಸಾಚಾರಿ ಇವರನ್ನು ಬ್ರಿಟಿಷ್ ಎಲ್ಲೆಗೆ ಕರೆದುಕೊಂಡು ಒಪ್ಪಿಸಿದರೆ ತಲೆಗೆ ಸಾವಿರ ರೂಪಾಯಿ ಕೊಡುವುದಾಗಿ ನೋಟೀಸ್ ಹಚ್ಚಿದರು. ಪುದುಚ್ಚೇರಿ ಪಟ್ಟಣದಲ್ಲೂ ಮದ್ರಾಸ್ ಪೊಲೀಸಿನ ಗುಪ್ತಚಾರರು ಹೆರಳವಾಗಿ ಅಲೆದಾಡುತ್ತಿದ್ದರು. ಭಾರತಿ ಮುಂತಾದವರು ಎಲ್ಲಿಗೆ ಹೋದರೂ ಅವರನ್ನು ಇವರು ಹಿಂಬಾಲಿಸುತ್ತಿದ್ದರು.

ಗೂಢಚಾರರು ಹಲವಾರು ವೇಷಗಳಲ್ಲಿ ಭಾರತಿಯ ಮನೆಗೆ ಬಂದು ಅವರ ಜತೆ ಮಾತುಕತೆ ನಡೆಸಿ ಅವರ ಮನಸ್ಸಿನ ಆಳವನ್ನು ಪತ್ತೆ ಹಚ್ಚ ಪ್ರಾರಂಭಿಸಿದರು. ಯಾವುದಾದರೂ ಕೈಬಾಂಬು, ತುಪಾಕಿ ಮುಂತಾದ ಆತಂಕದ ಕೆಲಸಗಳಲ್ಲಿ ಇವರೂ ಇದ್ದಾರೆಯೋ ಎಂದು ಅರಿಯಲು ಅವರು ಪ್ರಯತ್ನಿಸಿದರು.

ಭಾರತಿಗೆ ಬಲಾತ್ಕಾರದ ಕೈಬಾಂಬು, ತುಪಾಕಿ ಮುಂತಾದುವುಗಳಲ್ಲಿ ನಂಬಿಕೆ ಇರಲಿಲ್ಲ. ಅವುಗಳನ್ನು ಅವರು ಖಂಡಿಸಿದ್ದಾರೆ. ಆದರೂ ಪೊಲೀಸರು ಅವರಿಗೆ ಕಾಟವನ್ನು ಕೊಟ್ಟರು.


ಒಂದು ಬಾರಿ ಒಬ್ಬ ಪೊಲೀಸ್ ಗೂಢಚಾರಿ ವಜ್ರದ ವ್ಯಾಪಾರಿಯ ಹಾಗೆ ಭಾರತಿಯ ಬಳಿ ಬಂದ. ಅವನನ್ನು ಕಂಡುಕೊಂಡ ಭಾರತಿ, "ಅಯ್ಯಾ! ನನ್ನ ಬಳಿ ಸಾಹಿತ್ಯ ರತ್ನಗಳಿವೆ. ಅವುಗಳನ್ನು ಮಾರಲು ನಿಮ್ಮ ಸರ್ಕಾರದವರಿಗೆ ಶಿಫಾರಸು ಮಾಡಿರಿ. ನಿಮ್ಮ ಬಳಿ ಪೊಲೀಸ್ ಡೈರಿ ಇದೆಯಲ್ಲವೆ ?" ಎಂದು ಹೇಳಿದರು. ಗೂಢಚಾರ ನಮಸ್ಕರಿಸಿ ಅಲ್ಲಿಂದ ಜಾರಿದ.

ಮತ್ತೊಂದು ಬಾರಿ ಬೋಳು ತಲೆಯೊಂದಿಗೆ ಸಂನ್ಯಾಸಿಯಂತೆ ಬಟ್ಟೆಯನ್ನು ತೊಟ್ಟು ತಾನು

ಒಬ್ಬ ಸಾಹಿತ್ಯಪ್ರಿಯ ಎಂದೂ ಭಾರತಿಯ ಹಾಡನ್ನು ಕೇಳಲು ಪೊಲೀಸ್ ಕಣ್ಣಿಗೆ ಬೀಳದಂತೆ ಬಂದಿರುವುದಾಗಿಯೂ ಹೇಳಿದ. ಅವನೂ ಗೂಢಚಾರನೆಂದು ಊಹಿಸಿದ ಭಾರತಿ ಅವನು ಬರುವ ವೇಳೆಯಲ್ಲಿ, "ನಾಯೂ ಕೂಡ ಇಂಥಹ ಜೀವನವನ್ನು ಜೀವಿಸದು!" ಎಂದು ಹಾಡಿದರು. ಬಂದವನು ನಮಸ್ಕರಿಸಿದ. ಭಾರತಿ ನಕ್ಕರು. "ಗೃಹಸ್ಥರು ನಮಸ್ಕರಿಸಬೇಕು. ಸಂನ್ಯಾಸಿ ಆಶೀರ್ವದಿಸಬೇಕು. ಇದೂ ಅರಿಯದ ವೇಷಧಾರಿಯೆ! ಉತ್ತಮ ಜೀವನಮಟ್ಟದಲ್ಲಿ ಆಶೆಯನ್ನಿಡಬೇಡ" ಎಂದು ಹೇಳಿ ಕಳುಹಿಸಿದರು.

ಮತ್ತೊಂದು ಬಾರಿ ವ.ವೆ.ಸು. ಅಯ್ಯರ್ ಮನೆಯ ಹಿತ್ತಲಲ್ಲಿದ್ದ ಬಾವಿಯಲ್ಲಿ ಮುಚ್ಚಿದ್ದ ಜಾಡಿಯೊಂದು ಸಿಕ್ಕಿತು. ಅದನ್ನು ಯಾರೋ ತಂದು ಹಾಕಿದ್ದರು. ಅಯ್ಯರ್, ಭಾರತಿ ಮುಂತಾದವರು ಅದನ್ನು ಅಧಿಕಾರಿಗಳ ಹತ್ತಿರ ತೆಗೆದುಕೊಂಡು ಹೋಗಿ ಅವರ ಮುಂದೆ ಒಡೆದು ನೋಡಿದರು. ಆ ಜಾಡಿಯಲ್ಲಿ ಕೆಲವು ಪತ್ರಗಳಿದ್ದವು. ಅಯ್ಯರ್, ಭಾರತಿ, ನೀಲಕಂಠ ಬ್ರಹ್ಮಚಾರಿ ಮುಂತಾದ ದೇಶಭಕ್ತರು ಬಿಳಿಯರನ್ನು ಕೊಲ್ಲಲು ಷಡ್ಯಂತ್ರ ರಚಿಸಿರುವ ಹಾಗೆ ಅಚ್ಚು ಹಾಕಿದ ಕೆಲವು ನೋಟಿಸುಗಳಿದ್ದವು. ಇದು ಮದ್ರಾಸ್ ಪೊಲೀಸರ ಕೈಯಾಳುಗಳ ಕೆಲಸವೆಂದು ಅಯ್ಯರ್ ಮತ್ತು ಭಾರತಿ ನಿರೂಪಿಸಿದರು.

ವ.ವೆ.ಸು. ಅಯ್ಯರ್



ಇಂತಹ ಚಿಕ್ಕ ಪುಟ್ಟ ಕಾಟಗಳು ಬಯಲಾದ ನಂತರ ಫ್ರೆಂಚ್ ಇಂಡಿಯಾ ಅಧಿಕಾರಿಗಳ ಮೂಲಕ ಕೆಲವು ತಂತ್ರಗಳನ್ನು ಪೊಲೀಸಿನವರು ಪ್ರಯೋಗಿಸಿದರು. ಒಂದು ಗೊತ್ತಾದ ದಿನಾಂಕದೊಳಗೆ ಪುದುಚ್ಚೇರಿಯಲ್ಲಿರುವ ಅಲ್ಲಿಯ ಪ್ರಜೆಗಳಲ್ಲದವರು ಐದು ಜನ ಮ್ಯಾಜಿಸ್ಟ್ರೇಟ್‌ಗಳ ಹಸ್ತಾಕ್ಷರಗಳನ್ನು ತೆಗೆದುಕೊಂಡು ಬಂದರೆ ಮಾತ್ರ ಪುದುಚ್ಚೇರಿಯಲ್ಲಿರಬಹುದು ಎಂದು ಒಂದು ಕಾನೂನನ್ನು ಜಾರಿ ಮಾಡಿದರು. ಭಾರತಿ ಮುಂತಾದವರಿಗೆ ಮ್ಯಾಜಿಸ್ಟ್ರೇಟ್‌ಗಳು ಹಸ್ತಾಕ್ಷರ ಹಾಕಲಾರರು ಎಂದು ಮದ್ರಾಸ್ ಪೊಲೀಸರು ನೆನೆದಿದ್ದರು.

ವ.ಉ.



ನೆಲ್ಲಿಯಪ್ಪನ್



ಭಾರತಿದಾಸನ್





ಯಾವ ಗೌರವ ಮ್ಯಾಜಿಸ್ಟ್ರೇಟ್‌ಗಳ ಹಸ್ತಾಕ್ಷರವನ್ನು, ಹೇಗೆ ತೆಗೆದುಕೊಳ್ಳಲು ಸಾಧ್ಯ ಎಂದು ಎಲ್ಲರೂ ಪರದಾಡುತ್ತಿದ್ದಾಗ, ಭಾರತಿ ಕಲವೈ ಸಂಗರ ಸೆಟ್ಟಿಯಾರ್ ಎಂಬ ಪುದುಚ್ಚೇರಿ ಪ್ರಮುಖರ ಬಳಿ ಹೋದರು. "ಚೆಟ್ಟಿಯಾರ್‌ರವರೇ ನೀವೆಲ್ಲರೂ ಇರುವಾಗ ನಾವು ಪುದುಚ್ಚೇರಿಯನ್ನು ಬಿಟ್ಟು ಹೋಗಬೇಕೆ ?" ಎಂದರು.

ವಿಷಯವನ್ನು ಅರಿತ ಸಂಗರ ಸೆಟ್ಟಿಯಾರ್ "ಇಷ್ಟೇ ತಾನೆ ? ನಾನೇ ಒಬ್ಬ ಗೌರವ ಮ್ಯಾಜಿಸ್ಟ್ರೇಟ್. ಇಂದು ಸಾಯಂಕಾಲದೊಳಗೆ ಉಳಿದ ನಾಲ್ಕು ಮ್ಯಾಜಿಸ್ಟ್ರೇಟ್‌ಗಳ ಹಸ್ತಾಕ್ಷರವನ್ನು ನಾನೇ ತೆಗೆದುಕೊಂಡು ಬರುತ್ತೇನೆ, ಚಿಂತಿಸಬೇಡ" ಎಂದರು. ಬೆಟ್ಟದಂತಹ ಪ್ರಶ್ನೆ ಹಿಮದಂತೆ ಕರಗಿ ಹೋಯಿತು.

ಸಾಹಿತ್ಯದ ಶಿಷ್ಯರು

ಭಾರತಿ ಪುದುಚ್ಚೇರಿಯಲ್ಲಿದ್ದಾಗ ಅವರನ್ನು ತಮ್ಮ ಸಾಹಿತ್ಯ ಗುರುವಾಗಿ ಮಾಡಿಕೊಂಡ ಮೂರು ಜನ ಯುವಕ ಲೇಖಕರು ಅಲ್ಲಿ ಇದ್ದರು. ವ. ರಾಮಸ್ವಾಮಿ (ವ.ರಾ.), ಕನಗಸುಬ್ಬುರತ್ತಿನಂ (ಭಾರತಿದಾಸನ್), ಪರಲಿ.ಸು. ನೆಲ್ಲೆಯಪ್ಪ ಪಿಳ್ಳೈ ಈ ಮೂವರು ಭಾರತಿಯರ ಜೀವನ ಕಾಲದಲ್ಲಿ ಮತ್ತು ಅವರ ನಂತರ ಅವರ ಸಾಹಿತ್ಯದ ಮೇಧಾಶಕ್ತಿಯನ್ನು ಜಗತ್ತಿಗೆ ಪರಿಚಯ ಮಾಡಿಕೊಡಲು ದುಡಿದ ಸೇವಕರಲ್ಲಿ ಮುಖ್ಯರಾದವರು. ರಾಜಕೀಯದ ಕಾರಣಗಳಿಂದ ಭಾರತಿಯ ಗ್ರಂಥಗಳನ್ನು ಪ್ರಕಾಶಿಸಲು ಎಲ್ಲರೂ ಭಯಪಟ್ಟ ಕಾಲದಲ್ಲಿ, ನೆಲ್ಲೆಯಪ್ಪ ಪಿಳ್ಳೈ ಅಂಜದೆ ಮುಂದೆ ಬಂದು ಭಾರತಿಯ ಆರಿಸಿದ ಕೆಲವು ಹಾಡುಗಳನ್ನು ನಾಲ್ಕು ಗ್ರಂಥಗಳಾಗಿ ಪ್ರಕಟಿಸಿದರು. ಭಾರತಿ ಅಗಲಿದ ನಂತರ ಅವರು ಒಬ್ಬ ಮಹಾಕವಿ ಅಲ್ಲ, ಸಾಧಾರಣ ಕವಿ ಎಂದು ಕೆಲವರು ವಿಮರ್ಶಿಸಿದರು. ಇದನ್ನು ಒಪ್ಪದೆ ಭಾರತಿಯ ಕವಿತಾ ಮೇಧಾಶಕ್ತಿಯನ್ನು ವಿವರಿಸಿ ಅವರು ಮಹಾ ಕವಿಯೇ ಎಂದು ಸಾರಿ ಊರ್ಜಿತಗೊಳಿಸಿದವರು ವ.ರಾ. ಮತ್ತು ಭಾರತಿ ದಾಸನ್. ಭಾರತಿಯಾರ್‌ರಿಂದ ಪ್ರೇರೇಪಿಸಲ್ಪಟ್ಟು ತಮಿಳುನಾಡಿನ ಉತ್ತಮ ಕವಿಗಳಲ್ಲಿ ಒಬ್ಬರಾಗಿ ಪ್ರಖ್ಯಾತಿಯನ್ನು ಪಡೆದರು.

← ಮಡದಿ, ಇಬ್ಬರು ಹೆಣ್ಣು ಮಕ್ಕಳು ಮತ್ತು ಮಿತ್ರರೊಡನೆ ಭಾರತಿ.

ಸಾಹಿತ್ಯದಲ್ಲಿ ಹೊಸ ಪ್ರಯತ್ನಗಳು

ತಮಿಳು ಪತ್ರಿಕೆಗಳಿಲ್ಲದೆ, ತಮ್ಮ ಗ್ರಂಥಗಳನ್ನು ಪ್ರಕಟಿಸಲೂ ದಾರಿಯಿಲ್ಲದೆ ಇದ್ದ ಭಾರತಿ 1912ರಲ್ಲಿ ಮದ್ರಾಸಿನಲ್ಲಿದ್ದ ಆಂಗ್ಲ ಪತ್ರಿಕೆಗಳ ಸಂಪಾದಕರಿಗೆ ಪತ್ರಗಳನ್ನು ಬರೆಯತೊಡಗಿದರು. ಅನ್ನಿಬೆಸೆಂಟ್‌ರವರ 'ನ್ಯೂ ಇಂಡಿಯಾ' ದೈನಿಕ ಪತ್ರಿಕೆ, 'ಕಾಮನ್ ವ್ಹೀಲ್' ವಾರಪತ್ರಿಕೆ, ಕಸ್ತೂರಿ ರಂಗ ಅಯ್ಯಂಗಾರ್‌ರವರ 'ಹಿಂದೂ' ದೈನಿಕ ಮುಂತಾದುವುಗಳಲ್ಲಿ ಇವರ ಲೇಖನಗಳ ಬಗ್ಗೆ ಮೆಚ್ಚುಗೆ ಪ್ರಕಟಿಸಲಾಯಿತು.

ರಾಜಕೀಯದ ಬಗ್ಗೆ, ತತ್ವ ವಿಷಯಗಳ ಬಗ್ಗೆ ಭಾರತಿ ಬರೆದ ಈ ಇಂಗ್ಲೀಷ್ ಪತ್ರಗಳು 'ಸಂಪಾದಕರಿಗೆ ಪತ್ರಗಳು' ಎಂಬ ವಿಭಾಗದಲ್ಲಿ ಬರೆಯಲ್ಪಟ್ಟರೂ ಉತ್ತಮ ನಿಬಂಧಗಳಾಗಿವೆ. ಇವೂ ಮತ್ತು ಭಾರತೀಯ ಇಂಗ್ಲೀಷ್ ಕವಿತೆಗಳು ''ಅಗ್ನಿ ಆಂಡ್ ಅದರ್ ಪೊಯಮ್ಸ್' ಮತ್ತು ''ಎಸ್ಸೇಸ್'' ಎಂಬ ಎರಡು ಗ್ರಂಥಗಳಾಗಿ ಅಚ್ಚಾಗಿವೆ.

ಭಾರತಿಯ ಹತ್ತಿರ ಎಲ್ಲೆ ಇಲ್ಲದ ಪ್ರೀತಿ ತೋರಿಸಿದವರಲ್ಲಿ ಒಬ್ಬರಾದ ಎ. ರಂಗಸ್ವಾಮಿ ಅಯ್ಯಂಗಾರ್ 1915ರಲ್ಲಿ 'ಸ್ವದೇಶ ಮಿತ್ರನ್'ನ ಮಾಲೀಕರು ಮತ್ತು ಸಂಪಾದಕರಾದರು. ಪುದುಚ್ಚೇರಿಯಲ್ಲಿ ಭಾರತಿ ಬಡತನದಲ್ಲಿ ಬಾಳುವುದನ್ನು ಕಂಡ ಅವರು, ಭಾರತಿಯನ್ನು 'ಸ್ವದೇಶ ಮಿತ್ರನ್'ಗೆ ಕಥೆ ಮತ್ತು ನಿಬಂಧವನ್ನು ಬರೆಯಲು ಕೇಳಿಕೊಂಡರು. ಅಷ್ಟೆ ಅಲ್ಲ ಭಾರತಿ ಬರೆದರೂ ಬರೆಯದಿದ್ದರೂ ಪ್ರತಿ ತಿಂಗಳೂ ಮೂವತ್ತು ರೂಪಾಯಿ ಅವರ ಮಡದಿಗೆ ಮನಿಯಾರ್ಡರ್ ಮೂಲಕ ಕಳುಹಿಸಿಬಿಡುವೆವು ಎಂದು ಹೆಮ್ಮೆಯಿಂದ ಬರೆದಿದ್ದರು ರಂಗಸ್ವಾಮಿ ಅಯ್ಯಂಗಾರ್.

ಭಾರತಿ 'ಸ್ವದೇಶ ಮಿತ್ರ'ನಿಗೆ ಬರೆಯಲು ತೊಡಗಿದ ಪ್ರಾರಂಭದ ನಿಬಂಧಗಳು 'ತರಾಸು' (ತಕ್ಕಡಿ) ಎಂಬ ಶೀರ್ಷಿಕೆಯಲ್ಲಿ ಸಂಗ್ರಹಿಸಲ್ಪಟ್ಟವು. ಪ್ರತಿದಿನದ ಘಟನೆಗಳನ್ನು ಒಳಗೊಂಡಿರುವ, ನಮ್ಮ ಜತೆ ಪ್ರತಿದಿನ ಸಂಧಿಸುವ ಮನುಷ್ಯರನ್ನು ಚಿತ್ರಿಸಿ ಜೀವಂತ ಗದ್ಯ ಶೈಲಿಯಲ್ಲಿ ಚಿತ್ರಗಳನ್ನು ಬರೆಯುವುದರಲ್ಲಿ ತಮಗೆ ದಕ್ಷತೆ ಇರುವುದನ್ನು 'ತರಾಸು' ಮೂಲಕ ಭಾರತಿ ಅರಿತುಕೊಂಡರು. ತರಾಸಿನ ಜೊತೆಯಲ್ಲಿ ''ಇಡಿಪ್ಪಳ್ಳಿಕೂಡಂ'' (ಶಾಲೆಯ ಗುಡುಗು), ''ಕಡರ್ಪಾಲತ್ತಿಲ್'' (ಸಮುದ್ರ ಸೇತುವೆ) ಎಂಬ ಚಿತ್ರ ಶೈಲಿಯ ಗದ್ಯಗಳು ಉದಯವಾಯಿತು. ಇವುಗಳಲ್ಲಿ

ಮನುಷ್ಯರ ವರ್ಣನೆ, ಅವರ ಚಿಂತನಾಶಕ್ತಿ, ಮಾತಿನ ಶೈಲಿ, ಅವರ ಹಿರಿಮೆ ಮತ್ತು ದೋಷಗಳನ್ನು ಪ್ರತ್ಯಕ್ಷವಾಗಿ ನೋಡಿದ ಹಾಗೂ ಕೇಳಿದ ಹಾಗೆ ರಸವತ್ತಾಗಿ ಬರೆಯುತ್ತಿದ್ದರು, ಭಾರತಿ. ತಮ್ಮ ಸ್ನೇಹಿತರಿಗೆಲ್ಲಾ ಮುದ್ದು ಹೆಸರುಗಳನ್ನಿಟ್ಟು ಅವರನ್ನು ತಮಿಳು ಸಾಹಿತ್ಯದಲ್ಲಿ ಅಮರರನ್ನಾಗಿ ಮಾಡಿಬಿಟ್ಟರು.



ಎ. ರಂಗಸ್ವಾಮಿ ಐಯ್ಯಂಗಾರ್

ಯಾವಾಗಲೂ ವೇದಾಂತವನ್ನು ಮಾತನಾಡುವ ಒಬ್ಬ ಮಿತ್ರರು 'ಬ್ರಹ್ಮರಾಯ ಅಯ್ಯರ್' ಆದರು. ನಾಲ್ಕು ಮನೆಗಳಾಚೆಗೂ ಕೇಳಬಹುದಾದ ಅವರ ಮಾತು 'ಇಡಿಪ್ಪಳ್ಳಿಕ್ಕೂಡಂ' ಆಯಿತು. ಬಿಳಿ ಇಲಿಗಳನ್ನು ಸಾಕುವ ಒಬ್ಬ ಮಿತ್ರರು 'ಎಲಿಕ್ಕೊಂಜು ಚೆಟ್ಟಿಯಾರ್' ಆದರು. ಬಾಡಿಗೆ ವಸೂಲು ಮಾಡಲು ಬಂದ, ಭಾರತಿಯ ಬಳಿ ಭಕ್ತಿಯಿಂದ ಪಳಗಿದ, ಕೊನೆಗೆ ಬಾಡಿಗೆ ಬಾಕಿಯನ್ನು ಕೊಡುವಂತೆ ಕೇಳದೆ ಬಿಟ್ಟು ಹೋಗುವ ಮನೆಯ ಮಾಲೀಕ 'ವಿಳಕ್ಕೆಣ್ಣೆಯ್ಯೆ ಚೆಟ್ಟಿಯಾರ್' (ಹರಳೆಣ್ಣೆ ಚೆಟ್ಟಿಯಾರ್) ಆದರು.

ಪರಮಸಾಧುವಾದ ಒಬ್ಬ ದೇವಸ್ಥಾನದ ಅರ್ಚಕರು 'ಕೊಂಕಣ ಭಟ್ಟ'ರಾದರು. ಸಮಾಜ ಸುಧಾರಣೆಗಳನ್ನೂ, ಮಹಿಳಾ ಸ್ವಾತಂತ್ರ್ಯವನ್ನೂ ಬೋಧಿಸುವ ವೇದವಳ್ಳಿ ಅಮ್ಮಾಳ್ ತಮ್ಮ ಹೆಸರಿನಲ್ಲೆ ಬಂದು ಪುರುಷರನ್ನು ಹಿಯ್ಯಾಳಿಸಿದರು. ಪುದುಚ್ಚೇರಿಯಲ್ಲಿ ಮೊದಲು ಇದ್ದ ಉದ್ದವಾದ ಸಮುದ್ರ ಸೇತುವೆಯಲ್ಲಿ ಮಿತ್ರರು ಸೇರಿ ಮಾತನಾಡುವ ಬೀದಿ ಜಗಳಗಳೆಲ್ಲವೂ ಭಾರತಿಗೆ ನಿಬಂಧದ ವಿಷಯಗಳಾದವು. ತಾವು ಕವಿಗಳು ಮಾತ್ರ ಅಲ್ಲ, ತಮಿಳುಗದ್ಯ ಸಾಹಿತ್ಯದಲ್ಲೂ ಹೊಸತನವನ್ನು ತಂದವರು ಎಂಬ ಹಿರಿಮೆ ಭಾರತಿಗೆ ಮನವರಿಕೆಯಾಯಿತು.

ಕವಿರಾಯ ಮತ್ತು ಕಮ್ಮಾರ

'ಕದೈಕ್ಕೊತ್ತು' (ಕಥಾ ಸಂಗ್ರಹ) 'ನವತಂದಿರ ಕಥೆಗಳ್' (ನವತಂತ್ರ ಕಥೆಗಳು) ಮುಂತಾದ

ಹಾಸ್ಯರಸದ ಕಥೆಗಳು ಈ ಕಾಲದಲ್ಲೇ ಬೆಳಕಿಗೆ ಬಂದುವು. ಕದ್ಯೆಕ್ಕೊತ್ತಿನಲ್ಲಿ ಇರುವ ಕವಿರಾಯ ಮತ್ತು ಕಮ್ಮಾರ ಎಂಬ ಕಥೆಯ ಸಂಕ್ಷಿಪ್ತ ವಿವರಣೆ ಹೀಗಿದೆ:


ಒಂದು ದಿನ ಒಬ್ಬ ಕವಿ ರಸ್ತೆಯಲ್ಲಿ ಹೋಗುತ್ತಿದ್ದ. ಅಲ್ಲಿ ಒಬ್ಬ ಕಮ್ಮಾರನ ಕುಲುಮೆಯನ್ನು ಕಂಡ. ಅಲ್ಲಿ ಕಮ್ಮಾರ ಹಾಡುತ್ತಿದ್ದ. ಆ ಕವಿತೆ ಈ ಕವಿಯ ಹಾಡಾಗಿತ್ತು. ಅದನ್ನು ಸಂತೋಷದಿಂದ ಕೇಳಿದ ಕವಿ ತನ್ನ ಹಾಡುಗಳು ಜನರ ಬಾಯಿಯಲ್ಲಿ ಮೊಲಗುವುದಲ್ಲಾ ಎಂದು ಹಿರಿ ಹಿರಿ ಹಿಗ್ಗುತ್ತಾನೆ. ಇದ್ದಕ್ಕಿದ್ದಂತೆ ಅವನ ಮುಖ ಕೋಪಗೊಂಡಿತು. ಕಮ್ಮಾರ ಕವಿಯ ಹಾಡಿನ ಶಬ್ದಗಳನ್ನು ಸ್ಪಷ್ಟವಾಗಿ ಉಚ್ಚರಿಸದೆ ತಪ್ಪು ತಪ್ಪಾಗಿ ಹಾಡುತ್ತಾನೆ.

ಕವಿ ಕೂಡಲೇ ಒಳಗೆ ಹೋಗಿ ಕಮ್ಮಾರನ ಸಾಮಾನುಗಳನ್ನು ಚೆಲ್ಲಾಪಿಲ್ಲಿಯಾಗಿ ಎಸೆಯುತ್ತಾನೆ.

"ಯಾರೊ ನೀನು ಹುಚ್ಚ! ನನ್ನ ಸಾಮಾನುಗಳನ್ನು ಏಕೆ ತೆಗೆದು ಎಸೆಯುತ್ತಿದ್ದಿ? ಅವು ನನ್ನ ಜೀವನ!" ಎಂದು ಹೇಳಿದ ಕಮ್ಮಾರ.

"ಅಯ್ಯಾ ಸ್ವಲ್ಪ ಸಮಯ ಮುಂಚೆ ನೀನು ಹಾಡಿದ ಹಾಡುಗಳನ್ನು ಬರೆದ ಕವಿ ನಾನು. ನನ್ನ ಹಾಡನ್ನು ತಪ್ಪು ತಪ್ಪಾಗಿ ಹಾಡಿ ಕೊಂದು ಹಾಕಿದೆ. ಕವಿತೆಯ ಶಬ್ದಗಳು ನನ್ನ ಜೀವನಪ್ಪಾ!" ಎಂದು ಅವನಿಗೆ ಪಾಠ ಹೇಳುತ್ತಾನೆ ಕವಿ.

ಕವಿತೆಗಳ ಶಬ್ದಗಳ ರೂಪವನ್ನು ಬದಲಾಯಿಸದೆ ಸರಿಯಾಗಿ ಹಾಡಬೇಕು ಎಂಬುದನ್ನು ಹೀಗೆ ಕಥೆಯ ಮೂಲಕ ಬಣ್ಣಿಸಿದ್ದಾರೆ ಭಾರತಿ.



"ವಿಜಯವಾಗಲಿ ನಮ್ಮ ತಂದೆಗೆ !"

1918ರ ನವೆಂಬರ್ ತಿಂಗಳಲ್ಲಿ ಪುದುಚ್ಚೇರಿಯ ವಾಸ ಮುಗಿಯಿತು. ದೊಡ್ಡ ಸೆರೆಮನೆಯಂತಿದ್ದ ಪುದುಚ್ಚೇರಿಯನ್ನು ಬಿಟ್ಟು ಅವರು ಹೊರ ಬಂದರು. ಅವರನ್ನು ಬಂಧಿಸಿ 24 ದಿವಸ ಸೆರೆಮನೆಯಲ್ಲಿಟ್ಟು, ಬಿಡುಗಡೆ ಮಾಡಿದರು. ಭಾರತಿ ತಿರುನಲ್‌ವೇಲಿ ಜಿಲ್ಲೆಯಲ್ಲಿರುವ ತಮ್ಮ ಮಡದಿಯ ಊರಾದ ಕಡಯಂ ಗ್ರಾಮದಲ್ಲಿ ವಾಸ ಮಾಡಲು ಹೋದರು.

ಹತ್ತು ವರ್ಷಗಳ ನಂತರ ಬ್ರಿಟಿಷ್ ಭಾರತದಲ್ಲಿ ಸ್ವತಂತ್ರವಾಗಿ ಪ್ರವಾಸ ಮಾಡಲು ಆಗದ ಭಾರತಿ ಮೊಟ್ಟಮೊದಲು ತಮ್ಮ ಎಲ್ಲಾ ಗ್ರಂಥಗಳನ್ನೂ ಸಂಗ್ರಹಿಸಿ ನಲವತ್ತು ಭಾಗಗಳಾಗಿ ಪ್ರಕಟಿಸಲು ತೀರ್ಮಾನ ಮಾಡಿದರು. ಇದಕ್ಕೆ ಅವರು ವಿಸ್ತೃತವಾದ ಯೋಜನೆಯನ್ನು ತಯಾರಿಸಿ, ಬಡ್ಡಿಗೆ ಹಣವನ್ನು ಬೇಡಿ ಮಿತ್ರರಿಗೆ ಪತ್ರ ಬರೆದರು. ಆದರೆ ಅವರ ಅಂದಾಜಿನಂತೆ ಅವರಿಂದ ಹಣ ಸಂಗ್ರಹಿಸಲಾಗಲಿಲ್ಲ. ಆದುದರಿಂದ ತಮ್ಮ ಗ್ರಂಥವನ್ನು ಪ್ರಕಾಶಿಸುವ ಯೋಜನೆಯನ್ನು ಕೈಬಟ್ಟರು.

ಭಾರತಿ ಬ್ರಿಟಿಷ್ ಶಾಸನವನ್ನು ಪ್ರತ್ಯಕ್ಷವಾಗಿ ವಿರೋದಿಸಿದ ಕಾರಣ ಅವರಿಗೆ ಸಹಾಯ ಮಾಡಿದರೆ ರಾಜಕೋಪಕ್ಕೆ ಮತ್ತು ಅತೃಪ್ತಿಗೆ ಒಳಗಾಗಬೇಕಾಗುವುದು ಎಂದು ಹಲವರು ಭಯಪಟ್ಟರು.

ಮಹಾತ್ಮಾ ಗಾಂಧೀಗೆ ಶುಭಾಶಯಗಳು

1919ರ ಮಾರ್ಚ್ ತಿಂಗಳಿನಲ್ಲಿ ಭಾರತಿ ಇದ್ದಕ್ಕಿದ್ದಂತೆ ಮದ್ರಾಸ್ ಪಟ್ಟಣಕ್ಕೆ ಬಂದರು. ಮತ್ತೆ ಅವರಿಗೆ ಅಲ್ಲಿ ಕೆಲಸ ಸಿಗುವುದೋ ಏನೋ ಎಂದು ಬಂದಿರಬಹುದು.

ಅದೇ ಸಮಯದಲ್ಲಿ ಮಹಾತ್ಮಾ ಗಾಂಧೀ ಮದ್ರಾಸಿಗೆ ಬಂದಿದ್ದರು. ಅಸಹಕಾರ ಚಳುವಳಿಯನ್ನು ಪ್ರಾರಂಭಿಸಲು ಅವರು ಅಲ್ಲಿಗೆ ಬಂದಿದ್ದರು.

ಮದ್ರಾಸಿಗೆ ಬಂದ ಭಾರತಿ ಮಹಾತ್ಮಾ ಗಾಂಧೀಯನ್ನು ಕಂಡರು. "ನೀವು ಪ್ರಾರಂಭಿಸಲಿರುವ ಚಳುವಳಿಗೆ ನನ್ನ ಶುಭಾಶಯಗಳು" ಎಂದು ತಮ್ಮ ಆಶಯವನ್ನು ವ್ಯಕ್ತಪಡಿಸಿದರು.

ಅಂದು ಸಂಜೆ ತಿರುವಲ್ಲಿಕ್ಕೇಣಿ ಸಮುದ್ರ ತೀರದಲ್ಲಿ ತಾವು ಏರ್ಪಾಟು ಮಾಡಿದ್ದ ಒಂದು

ಸಾರ್ವಜನಿಕ ಸಭೆಯಲ್ಲಿ 'ಮಹಾತ್ಮಾ ಗಾಂಧೀ ಪಂಚಕ' ಎಂಬ ಹೊಸ ಹಾಡನ್ನು ಹಾಡಿದರು. 'ವಾಳ್ಗನೀ ಎಮ್ಮಾನ್' (ವಿಜಯವಾಗಲಿ ನಮ್ಮ ತಂದೆಗೆ) ಎಂದು ಪ್ರಾರಂಭವಾಗುವ ಈ ಹಾಡಿನಲ್ಲಿ "ಹಿಂಸಾಹತ್ಯೆಯ ಯುದ್ಧ ಮಾರ್ಗವನ್ನು ಖಂಡಿಸಿದೆ" ಎಂದೂ ಅದಕ್ಕಿಂತ ಹೆಚ್ಚಾದ ಶಕ್ತಿಯುತವಾದ "ಯುದ್ಧ ನೀತಿ, ಧರ್ಮ ನೀತಿ" ಎಂದೂ ಗಾಂಧೀಜಿಯವರ "ಅಸಹಕಾರ ಚಳುವಳಿ"ಯ ಮೂಲಕ ಭಾರತಕ್ಕೆ ಬರುವ ಸದ್ಗತಿಯನ್ನು ಕಂಡು, ದ್ವೇಷದ ಭಾವನೆಯನ್ನು ತೊರೆದು ಪ್ರಪಂಚವೆಲ್ಲವೂ ಬಾಳಲಿ, ಸತ್ಯಧರ್ಮದ ಆಧಾರದ ಮೇಲೆ!" ಎಂದೂ ತಮ್ಮ ದೀರ್ಘ ದೃಷ್ಟಿಯನ್ನು ತೋರಿಸಿದರು.

1920ರಲ್ಲಿ ಪ್ರಿಯರೊಬ್ಬರಿಗೆ ಭಾರತಿ ಬರೆದ ಪತ್ರ

ஓம் சக்தி

கடையம்
[illegible] 1920

[illegible]

ಮಹಾತ್ಮಾ ಗಾಂಧೀಯನ್ನು ಭಾರತಿ ಹಿಂದೆ ಇನ್ನೊಂದು ಹಾಡಿನಲ್ಲಿ ಪ್ರಶಂಸಿಸಿದ್ದಾರೆ. 'ಭಾರತ ನವರತ್ನ ಮಾಲೈ' ಎಂಬ ಹಾಡಿನಲ್ಲಿ "ಕೆಡುಕಿಲ್ಲದ ನಮ್ಮ ಮಾತೃಭೂಮಿಯಲ್ಲಿ ಕ್ರಾಂತಿಯನ್ನು ಎಬ್ಬಿಸಿದೆ" ಎಂದು ಗಾಂಧೀಜಿಯವರನ್ನು ಹೊಗಳಿದರು.

"ಚಳಿತಾಪವಿಲ್ಲ ಜೀವಕ್ಕೆ;
ಬಳಲುವಿಕೆ - ಸೋಲುವಿಕೆ, ಸೇವಕರಿಗಿಲ್ಲ,
ಧರ್ಮದ ಯುದ್ಧವನ್ನು ಮಾಡೋಣ !
ಎಲ್ಲೊ ಜಗತ್ತನ್ನು ಎತ್ತಿ ಹಿಡಿದ ಗಾಂಧೀ"
ಎಂದು ಶುಭಾಶಯ ಕೋರಿದ್ದಾರೆ.

ತಿಲಕರ ಸೇವಕರಾಗಿ ಖ್ಯಾತಿ ಪಡೆದ ಭಾರತಿ ತಿಲಕರ ನಂತರ ದೇಶದ ಮುಖಂಡರಾಗಿ ಗಾಂಧೀಜಿ ಬಂದ ಕೂಡಲೆ, ಇವರನ್ನು ಮನಬಿಚ್ಚಿ ಸ್ವಾಗತಿಸಿದರು.

ಮತ್ತೆ ಮದ್ರಾಸಿನಲ್ಲಿ

1920ನೇ ಇಸ್ವಿಯ ಅಂತಿಮ ಭಾಗದಲ್ಲಿ ಭಾರತಿ "ಸ್ವದೇಶಮಿತ್ರನ್" ಪತ್ರಿಕೆಗೆ ಬಂದು ಸೇರಿದರು. ಅವರಿಗೆ ಅಲ್ಲಿ ಪ್ರತ್ಯೇಕ ಮರ್ಯಾದೆಯನ್ನು ತೋರಿಸಿದರು. ದೈನಂದಿನ ಕೆಲಸದೊಂದಿಗೆ ಮತ್ತೆ ಹೆಚ್ಚು ರಾಜಕೀಯ ಟಿಪ್ಪಣಿಗಳನ್ನು, ಕಥೆಗಳನ್ನು, ನಿಬಂಧನೆಗಳನ್ನು ಬರೆದರು.

ಭಾರತಿಯಾರ್ ತಿರುವಳ್ಳಿಕ್ಕೇಣಿಯಲ್ಲಿ ತೆಳ್ಳಿಯ ಸಿಂಗಪ್ಪಿರುಮಾಳ್ ಕೊಯಿಲ್ ಬೀದಿಯಲ್ಲಿ ಒಂದು ಮನೆಯಲ್ಲಿ ವಾಸ ಮಾಡಿದರು. ಅದೇ ಅವರು ಕೊನೆಯದಾಗಿ ಬಾಳಿದ ಮನೆ.

ಭಾರತಿಯಾರ್ ತಮ್ಮ ಕೊನೆಯ ದಿನಗಳಲ್ಲಿ ವಾಸ ಮಾಡಿದ ಮದರಾಸಿನ ತಿರುವಳ್ಳಿಕ್ಕೇಣಿಯಲ್ಲಿನ ಮನೆ.



ಭಾರತಿ ಇಲ್ಲಿ ನೆಲೆಸಿದ್ದ ಸಮಯದಲ್ಲಿ ನೀಲಕಂಠ ಬ್ರಹ್ಮಚಾರಿ ಎಂಬ ಹಳೆಯ ಮಿತ್ರರು ಅವರನ್ನು ಹುಡುಕಿಕೊಂಡು ಬಂದರು. ನೀಲಕಂಠನ್ ಕ್ರಾಂತಿ ಚಳುವಳಿಯಲ್ಲಿ ಭಾಗವಹಿಸಿ ಹೆಚ್ಚು ಕಾಲ ಸೆರೆಮನೆ ವಾಸವನ್ನು ಅನುಭವಿಸಿದವರು, ಬಿಡುಗಡೆಯಾಗಿ ಬಂದ ಮೇಲೂ ಅವರು ತೀವ್ರವಾದಿಯಾಗಿ ಪ್ರಸಿದ್ಧಿ ಪಡೆದಿದ್ದು. ಅವರನ್ನು ನೋಡಿ ಎಲ್ಲರೂ ದೂರ ಸರಿಯುತ್ತಿದ್ದರು. ವರಮಾನ ಇಲ್ಲದೆ ಹಸಿವಿನಿಂದ ಬಳಲುತ್ತಿದ್ದರು.

ಭಾರತಿ ಮನೆಯಲ್ಲಿರಲಿಲ್ಲ. ನೀಲಕಂಠರ ದುಃಖದ ಕಥೆಯನ್ನು ಕೇಳಿದ ಭಾರತಿಯ ಮಗಳು ಶಕುಂತಲಾ ತನ್ನ ಬಳಿ ಇದ್ದ ಎರಡಾಣೆಯನ್ನು ಅವರಿಗೆ ಕೊಟ್ಟಳು. ನೀಲಕಂಠನ್ ಅದರಿಂದ ತನ್ನ ಹಸಿವು ನೀಗಿಸಿಕೊಂಡು ಭಾರತಿ ಇರುವ ವೇಳೆಗೆ ಮತ್ತೆ ಬಂದರು. "ಸ್ವಾಮಿ ನಾನು ಊಟ ಮಾಡಿ ಮೂರು ದಿನಗಳಾದವು" ಎಂದು ಭಾರತಿಯ ಬಳಿ ದುಃಖದಿಂದ ಹೇಳಿದರು.

ಭಾರತಿಯ ಮನಸ್ಸು ಕೆರಳಿತು, "ಅಯ್ಯೋ ! ಎಂತಹ ಪ್ರಪಂಚ ! ದೇಶಭಕ್ತರು ಹೀಗೆ ಊಟಕ್ಕೆ ಪರದಾಡಬೇಕೆ !" ಎಂದು ದುಃಖಪಟ್ಟರು. ಪಕ್ಕದ ಮನೆಯವರಿಂದ ಐದು ರೂಪಾಯಿ ಸಾಲ ಮಾಡಿ ನೀಲಕಂಠನಿಗೆ ಕೊಟ್ಟು ಕಳುಹಿಸಿದರು.

"ಭಾರತ ಸಮಾಜ ಬಾಳಲಿ !"

ದೇಶಲ್ಲಿ ಜನರು ಹೀಗೆ ಹಸಿವಿನಿಂದ ಬಳಲಬೇಕೆ ? ದೇಶಕ್ಕಾಗಿ ತಮ್ಮ ಪ್ರಾಣವನ್ನು ತೆತ್ತಬಲ್ಲ ದೇಶಭಕ್ತರು ಹೀಗೆ ಹಸಿವಿನ ಬಾಯಿಗೆ ತುತ್ತಾಗುವುದೇ ? ಭಾರತಿ ಇದನ್ನು ನೆನೆದು ನೆನೆದು ಮನಸ್ಸಿನಲ್ಲಿ ತಳಮಳಗೊಂಡರು. ಇದರ ಪರಿಣಾಮವಾಗಿ ಹುಟ್ಟಿತು ಒಂದು ಅದ್ಭುತ ಕವಿತೆ.

"ಭಾರತ ಸಮಾಜ ಬಾಳಲಿ" ಎಂಬ ಆ ಹಾಡಿನಲ್ಲಿ ಭಾರತದ ಜನರು ಪ್ರಪಂಚವೇ ಬೆರಗಾಗುವಂತಹ ಒಂದು ಹೋಲಿಸಲಾಗದ ಸಮಾಜವನ್ನು ಕಟ್ಟುತ್ತಾರೆ ಎಂದು ಭಾರತಿ ಹಾಡಿದ್ದಾರೆ. ಮದ್ರಾಸಿನ ಸಮುದ್ರ ತೀರದಲ್ಲಿ ಸಾರ್ವಜನಿಕ ಸಭೆಯಲ್ಲಿ ಅವರು ಹಾಡಿದ ಕೊನೆಯ ಹಾಡು ಇದೇ. ಆ ಹಾಡು ಹೀಗಿದೆ:-

ಪಲ್ಲವಿ

ಭಾರತ ಸಮಾಜ ಬಾಳಲಿ ! ಬಾಳಲಿ ! ಬಾಳಲಿ !
ಭಾರತ ಸಮುದಾಯ ಬಾಳಲಿ ! - ಜಯ, ಜಯ, ಜಯ (ಭಾರತ)

ಅನುಪಲ್ಲವಿ

ಮೂವತ್ತುಕೋಟಿ ಜನಗಳ ಸಂಘ
ಸಂಪೂರ್ಣ ಆಸ್ತಿ ಎಲ್ಲರಿಗೂ ಸರಿಸಮವಾಗಲಿ
ಹೋಲಿಸಲಾಗದ ಒಂದು ಸಮಾಜವನ್ನು ಕಟ್ಟುವ
ಪ್ರಪಂಚಕ್ಕೆ ಒಂದು ಹೊಸತನವನ್ನು ತೋರುವ - ಬಾಳಲಿ (ಭಾರತ)

1. ಮನುಷ್ಯರ ಊಟವನ್ನು ಮನುಷ್ಯರು ಕೀಳುವ
ರೂಢಿ ಮತ್ತೆ ಬರುವುದೋ ?
ಮನುಷ್ಯರನ್ನು ನೋಯಿಸಿ, ಮನುಷ್ಯರನ್ನು ನೋಡುವ
ಬಾಳು ಮತ್ತೆ ಬರುವುದೋ ? - ಪಂಚೇಂದ್ರಿಯಗಳಲ್ಲಿ
ಬಾಳು ಮತ್ತೆ ಬರುವುದೋ ? - ನಮ್ಮೊಳಗೆ
ಇಂತಹ ಬದುಕು ಮತ್ತೆ ಬರುವುದೋ ? (ಭಾರತ)

2. ಈಗ ಒಂದು ಕಾನೂನು ಮಾಡುವ - ಅದನ್ನು
ಎಂದೆಂದಿಗೂ ಕಾಯುವ
ಒಬ್ಬನಿಗೆ ಆಹಾರ ದೊರಕದಿದ್ದಲ್ಲಿ
ಜಗತ್ತನ್ನೆ ಅಳಿಸಿ ಬಿಡುವ ! (ಭಾರತ)

3. ನಾವೆಲ್ಲ ಒಂದೇ ಜಾತಿ ಒಂದೇ ಕುಲ
ನಾವೆಲ್ಲ ಭಾರತದ ಮಕ್ಕಳು
ಎಲ್ಲರೂ ಒಂದೇ ತೂಕ, ಎಲ್ಲರೂ ಒಂದೇ ಬೆಲೆ
ಎಲ್ಲರೂ ಈ ದೇಶದ ರಾಜರು - ನಾವು
ಎಲ್ಲರೂ ಈ ದೇಶದ ರಾಜರು - ಹೌದು
ನಾವೆಲ್ಲರೂ ಈ ದೇಶದ ರಾಜರು - ಬಾಳಲಿ ! (ಭಾರತ)

ಮಹಾಕವಿ ಭಾರತಿಯ ಅತ್ಯುತ್ತಮ ವಿಚಾರಗಳು ಪೂರ್ಣವಾಗಿ ವೀರಾವೇಶದಿಂದ ಸಿಡಿದು ಬಂದ ಈ ಕವಿತೆ, ತಮಿಳುಭಾಷೆಯ ಎಂದಿಗೂ ಪ್ರಕಾಶ ಕುಂದದ ಕವಿತಾ ಮಣಿಗಳಲ್ಲಿ ಒಂದಾಗಿದೆ.

ಭಾರತಿಗೆ ಈ ಕಾಲದಲ್ಲಿ "ಅಮರತ್ವ" ಎಂಬ ವಿಚಾರ ಬಹಳ ಹಿಡಿಸಿತ್ತು. "ಮನುಷ್ಯನಿಗೆ ಸಾವಿಲ್ಲ" ಎಂದೂ ಅವನು "ನಿತ್ಯಜೀವಿ" ಯಾಗಬಹುದು ಎಂದೂ ಅವರು ಮತ್ತೆ ಮತ್ತೆ ಹೇಳುತ್ತಿದ್ದರು, ಬರೆಯುತ್ತಿದ್ದರು. ಈ ಸಮಯದಲ್ಲಿ ಅವರು ಹಾಡಿರುವ ಒಂದು ಹಾಡಿನಲ್ಲಿ ಕಾಲನನ್ನೆ ಲಕ್ಷಿಸದೆ ವಿವರಿಸಿದ್ದಾರೆ. ಕಾಲ ಮನುಷ್ಯರ ಜೀವವನ್ನು ಕಬಳಿಸುವವ. ಅವನ ಬಳಿ ಹೀಗೆಂದರು -

"ಯಮನೇ, ನಾನು ನಿನ್ನನ್ನು ಒಂದು ಚಿಕ್ಕ ಹುಲ್ಲನ್ನಾಗಿ ಭಾವಿಸುತ್ತೇನೆ -
ನನ್ನ ಕಾಲಿನ ಬಳಿ ಬಾರೊ, ತಕ್ಷಣ ನಿನ್ನನ್ನು ತುಳಿದುಬಿಡುತ್ತೇನೆ."

ಎಂದು ಅವರು ಯಮನನ್ನು ಲಕ್ಷಿಸದೆ ಕೂಗಿದರು. "ಹಿಂದೆ ಆದಿ ಮೂಲ ಎಂದು ಕೂಗಿದ ಆನೆ, ಗಜೇಂದ್ರನ ಪ್ರಾಣವನ್ನು ಕಬಳಿಸಲು ನೀನು ಮೊಸಳೆಯ ರೂಪದಲ್ಲಿ ಹೋಗಿ ಅವನ

ಪ್ರಾಣವನ್ನು ಕಬಳಿಸಲಾಗದೆ, ಮೊಸಳೆ ಸತ್ತದ್ದನ್ನೂ ಮಾರ್ಕಂಡೇಯನ ಪ್ರಾಣವನ್ನು ಕಬಳಿಸಲು ಹೋದಾಗ ಅದೂ ಕೈಯಲ್ಲಾಗದೇ ನೀನು ಪಟ್ಟ ಕಷ್ಟವನ್ನೂ ಮರೆತುಬಿಟ್ಟೆಯಾ ?'' ಎಂದು ಈ ಹಾಡಿನಲ್ಲಿ ಭಾರತಿ ಹೇಳುತ್ತಾರೆ. ತಮ್ಮ ಅಂತಿಮಕಾಲ ಹತ್ತಿರ ಬಂದಿರುವುದನ್ನು ಬಹುಶಃ ಕವಿ ಮನದಟ್ಟು ಮಾಡಿಕೊಂಡಿರಬೇಕೆಂದು ಕಾಣಿಸುತ್ತದೆ.



1920ರಲ್ಲಿ ಕಾರೈಕ್ಕುಡಿಯಲ್ಲಿ ತೆಗೆದ ಭಾರತಿಯಾರ್ ಅವರ ಚಿತ್ರ

ಆನೆಯ ಕಾಲಡಿಯಲ್ಲಿ ಭಾರತಿ

ಭಾರತಿ ಪ್ರತಿದಿನ ತಿರುವಳ್ಳಿಕ್ಕೇಣಿ ಪಾರ್ಥಸಾರಥಿ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿ ಬರುತ್ತಿದ್ದರು. ಬರಿ ಕೈಯಲ್ಲಿ ಹೋಗುತ್ತಿರಲಿಲ್ಲ. ತೆಂಗಿನಕಾಯಿ ಬಾಳೆಹಣ್ಣು ತೆಗೆದುಕೊಂಡು ಹೋಗುತ್ತಿದ್ದರು. ಅವುಗಳನ್ನು ದೇವರ ಸನ್ನಿಧಿಯಲ್ಲಿ ಸ್ವತಃ ಪೂಜೆ ಮಾಡಿ ದೇವಸ್ಥಾನದ ಆನೆಗೆ ತೆಂಗಿನಕಾಯಿ ಬಾಳೆ ಹಣ್ಣನ್ನು ಕೊಡುತ್ತಿದ್ದರು. ಭಯ ಇಲ್ಲದೆ ಆನೆಯ ಹತ್ತಿರ ಹೋಗಿ, ''ಸ್ನೇಹಿತನೆ ನಾನು ಭಾರತಿ ಬಂದಿದ್ದೇನೆ'' ಎಂದು ಆದರೊಡನೆ ಸಂಭಾಷಿಸಿ, ಕೊಡುತ್ತಿದ್ದರು. ಆನೆ ಅವರನ್ನು ಚೆನ್ನಾಗಿ ಅರಿತುಕೊಂಡು ತೆಂಗಿನಕಾಯಿ ಬಾಳೆಯ ಹಣ್ಣನ್ನು ತೆಗದುಕೊಳ್ಳುತ್ತಿತ್ತು.

1921ರ ಜೂನ್ ತಿಂಗಳಿನಲ್ಲಿ ಆನೆಗೆ ಮದ ಹಿಡಿದಿತ್ತು. ಅದನ್ನು ದೇವಸ್ಥಾನದ ಕಾಂಪೌಂಡಿನ ಬಳಿ ಒಂದು ಪ್ರತ್ಯೇಕ ಸ್ಥಾನದಲ್ಲಿ ಸರಪಣಿಯಿಂದ ಕಟ್ಟಿ ಹಾಕಿದ್ದರು.

ಪ್ರತಿದಿನದ ರೂಢಿಯಂತೆ ತೆಂಗಿನಕಾಯಿ ಬಾಳೆ ಹಣ್ಣಿನೊಂದಿಗೆ ಭಾರತಿ ಬಂದರು. ''ಆನೆಗೆ ಮದ ಹಿಡಿದಿದೆ. ಹತ್ತಿರ ಹೋಗಬೇಡಿ'' ಎಂದು ಜನರು ಕೂಗಿದರು. ಆದರೆ ಭಾರತಿ ಅದನ್ನು ಗಮನಿಸಲಿಲ್ಲ. ತೆಂಗಿನಕಾಯಿ ಬಾಳೆಹಣ್ಣಿನ ಜೊತೆ ಆನೆಯ ಬಳಿ ಹೋದರು. ಎಲ್ಲೋ ನೋಡುತ್ತಿದ್ದ ಆನೆ ತಲೆಯನ್ನು ತಿರುಗಿಸಿತು. ತಲೆಯನ್ನು ತಿರುಗಿಸಿದಾಗ ಆನೆಯ ಸೊಂಡಿಲು ಭಾರತಿಗೆ ತಾಗಿತು. ಸಣ್ಣ ಶರೀರ ಹೊಂದಿದ್ದ ಭಾರತಿ ಕೆಳಗೆ ಬಿದ್ದರು. ತಲೆಯಲ್ಲಿ ಒಂದು ಗಾಯವಾಯಿತು. ಶರೀರದಲ್ಲಿ ಕೆಲವು ಭಾಗ ತರಚಿಹೋದವು. ಭಾರತಿ ಮೂರ್ಛೆಗೊಂಡರು.

ಆನೆಯ ಕಾಲಡಿಯಲ್ಲಿ ಭಾರತಿ ಬಿದ್ದಿರುವುದನ್ನು ಕಂಡ ಜನರು ''ಅಯ್ಯೋ ! ಅಯ್ಯೋ !'' ಎಂದು ಕೂಗಿದರು. ಯಾರಿಗೂ ಅವರನ್ನು ಹೊರಗೆ ಎಳೆದುಕೊಂಡು ಬರುವ ಧೈರ್ಯವಿರಲಿಲ್ಲ.



ಆನೆಯಂತೂ ಕೆಳಗೆ ಬಿದ್ದ ಭಾರತಿಯನ್ನು ಏನೂ ಮಾಡಲಿಲ್ಲ. ಬಹುಶಃ ಅವರು ತನ್ನ ಮಿತ್ರರು ಎಂದು ತಿಳಿದಿರಬೇಕು. ಅದು ಬಯಸಿದ್ದರೆ ಭಾರತಿಯನ್ನು ಕಾಲಿನಿಂದ ತುಳಿದು, ಸೊಂಡಿಲಿನಿಂದ ಎತ್ತಿ ಹಾಕಿ, ಒಗೆದಿರಬಹುದಿತ್ತು. ಅದು ಹಾಗೆ ಮಾಡಲಿಲ್ಲ.

ನೋಡಿದವರೆಲ್ಲ ಮದಗೊಂಡ ಆನೆಯ ಬಳಿ ಹೋಗಲು ಭಯಪಟ್ಟು ಏನು ಮಾಡುವುದೆಂದು ತೋಚದೆ ನಿಂತಿದ್ದರು. ಆ ವೇಳೆಗೆ ಭಾರತಿಯ ಮಿತ್ರರಾದ ಕುವಳೈ ಕಣ್ಣನ್‌ರವರಿಗೆ ಸಮಾಚಾರ ಗೊತ್ತಾಯಿತು. ತಮ್ಮ ಭಾರಿ ಶರೀರವನ್ನು ಹೊತ್ತು ಓಡೋಡಿ ಬಂದರು. ಕ್ಷಣವೂ ಯೋಚಿಸದೆ ಆನೆಯ ಕಾಲುಗಳ ಮಧ್ಯೆ ಹಾಯ್ದರು. ಭಾರತಿಯನ್ನು ಹೊತ್ತು ತೋಳಿನ ಮೇಲೆ ಹಾಕಿಕೊಂಡರು, ಹೊರಗೆ ಬಂದರು. ಆನೆ ಆಗಲೂ ಸುಮ್ಮನಿತ್ತು. ಅವರನ್ನೂ ಭಾರತಿಯನ್ನೂ ಏನೂ ಮಾಡಲಿಲ್ಲ.

"ವಿರಾಧಿವೀರ ಕುವಳೆಯೂರ್ ಕಣ್ಣನ್ ಎಂಬುವನು" ಎಂದು ಭಾರತಿ ಪ್ರಶಂಸಿಸಿದ ಕುವಳೈ ಕಣ್ಣನ್ ಭಾರತಿಯನ್ನು ಕಾಪಾಡಿದರು. ಅವರನ್ನು ರಾಯ ಪೇಟ್ಟೈ ಆಸ್ಪತ್ರೆಗೆ ಹೊತ್ತು ತಂದರು.

ಗಾಯಗಳು ಮಾಗಿ ಭಾರತಿ ಗುಣ ಹೊಂದಲು ಕೆಲವು ದಿನಗಳಾದವು. ಭಾರತಿ ಆನೆಯಿಂದ ಗಾಯಗೊಂಡು ಮಡಿದರು ಎಂದು ಈಗಲೂ ಕೆಲವರು ತಪ್ಪಾಗಿ ಹೇಳುತ್ತಾರೆ. ಇದು ಸರಿಯಲ್ಲ.



ಗುಣವಾದ ಭಾರತಿ "ದೇವಸ್ಥಾನದ ಆನೆ" ಎಂದು ಒಂದು ನಿಬಂಧವನ್ನು ಬರೆದಿದ್ದಾರೆ. ಆನೆ ಬಯಸಿದ್ದರೆ ತನ್ನನ್ನು ಕ್ಷಣದಲ್ಲಿ ಮೇಲೆಸೆದು, ತುಳಿದಿರಬಹುದಾಗಿತ್ತು ಎಂದು ಅವರು ನಿಬಂಧದಲ್ಲಿ ಹೇಳಿದ್ದಾರೆ.

ಈ ಆನೆಯ ಘಟನೆ ನಡೆದು ಗುಣವಾದ ನಂತರವೂ ಭಾರತಿ ಆನೆಗೆ ತೆಂಗಿನಕಾಯಿ ಬಾಳೆಹಣ್ಣು ಕೊಡುತ್ತಿದ್ದರೆಂದು ಭಾರತಿಯ ಚಿಕ್ಕಮಗಳು ಶಕುಂತಲಾ ಬರೆದಿದ್ದಾರೆ. ಭಾರತಿ ಮತ್ತೆ ಕೆಲಸಕ್ಕೆ ಹೋದರೆಂದೂ, ಹಿಂದಿನ ಹಾಗೇ ದೇಶಭಕ್ತಿ ಗೀತೆಗಳನ್ನು ಹಾಡುತ್ತಿದ್ದರೆಂದೂ ಸಮುದ್ರ ತೀರಕ್ಕೆ ಹೋಗಿ ಬರುತ್ತಿದ್ದರೆಂದೂ, ಶಕುಂತಲಾ ಹೇಳುತ್ತಾರೆ.

ತನ್ನ ಕಾಲನ ಹಾಡಿನಲ್ಲಿ ಭಾರತಿ "ಆದಿಮೂಲಾ!" ಎಂದು ಕೂಗಿದ ಗಜೇಂದ್ರನ ಬಗ್ಗೆ ಯಮನಿಗೆ ನೆನಪು ಮಾಡಿದರಲ್ಲವೇ? ಆನೆಯ ರೂಪದಲ್ಲಿ ಬಂದು ಪ್ರಾಣವನ್ನು ಕಸಿದುಕೊಂಡು ಹೋಗಲು ಯಮ ಭಯಪಟ್ಟಂತೆ ಕಾಣುತ್ತಾನೆ.

ಕೊನೆಯ ದಿನ

ಆದರೆ ಹೋಗುವ ಕಾಲಬಂದರೆ ಯಮ ಯಾವುದಾದರೂ ಒಂದು ರೂಪಿನಲ್ಲಿ ಬಂದೇ ಬರುತ್ತಾನೆ!

ಆನೆಯ ಘಟನೆ ನಡೆದ ಎರಡು ತಿಂಗಳೊಳಗೆ ಭಾರತಿಗೆ ಆಮಶಂಕೆ ರೋಗ ಬಲವಾಗಿ ಕಾಡಿತು.

ತನ್ನ ಕಾಲ ಮುಗಿದು ಹೋಯಿತೆಂಬುದನ್ನು ಬಹುಶಃ ಅರಿತುಕೊಂಡರೊ ಏನೋ, ಅವರು ಔಷಧ ಕುಡಿಯುವುದನ್ನು ನಿಲ್ಲಿಸಿಬಿಟ್ಟರು. ಅವರ ದೇಹ ಬಲಹೀನವಾಗಿತ್ತು. ಆದರೆ ಅವರ ಹಟ ಸ್ವಲ್ಪವೂ ಕಡಿಮೆಯಾಗಲಿಲ್ಲ. ಮಡದಿ ಚೆಲ್ಲಮ್ಮಾಳ್ ಎಷ್ಟು ಹೇಳಿದರೂ ಕೇಳಲಿಲ್ಲ. ಅಕ್ಕಪಕ್ಕದ ಮಿತ್ರರು ಎಷ್ಟು ಹೇಳಿದರೂ ಕೇಳಲಿಲ್ಲ. ಭಾರತಿ ಔಷದಿ ತೆಗೆದುಕೊಳ್ಳಲಿಲ್ಲ.

ಗೌರವಕ್ಕೆ ಪಾತ್ರರಾದ ವ.ವೇ.ಸು. ಅಯ್ಯರ್ ಸಹಾ ಭಾರತಿಯ ಬಳಿ ಹೇಳಿದರು. "ಭಾರತಿ ನೀನು ರೋಗಕ್ಕೆ ಔಷಧಿ ತೆಗದುಕೊಳ್ಳುವುದಿಲ್ಲ ಎಂದು ಹೇಳುತ್ತೀಯಲ್ಲ, ಔಷಧಿ ಕುಡಿದು ದೇಹಕ್ಕೆ ಶಕ್ತಿ ಬರುವಂತೆ ಮಾಡಿಕೊಳ್ಳಬೇಡವೇ?" ಎಂದರು. ಆದರೆ ಆಗಲೂ ಭಾರತಿ ಒಪ್ಪಲಿಲ್ಲ.

1921ನೇ ಸೆಪ್ಟೆಂಬರ್ 11ನೇಯ ತಾರೀಖು ಸಾಯಂಕಾಲ ಭಾರತಿಯ ಶರೀರದ ಸ್ಥಿತಿ ಚಿಂತಾಜನಕವಾಯಿತು. ಅವರು ಮೂರ್ಛಾಸ್ಥಿತಿ ಹೊಂದಿದರು.

ಭಾರತಿಯ ಮಿತ್ರರು ನೀಲಕಂಠ ಬ್ರಹ್ಮಚಾರಿ, ಪರಲಿ ಸು. ನೆಲ್ಲೆಯಪ್ಪರ್ ಮುಂತಾದವರು, ಭಾರತಿಯ ಸಂಬಂಧಿಕರು, ಕಿ. ಲಕ್ಷಣ ಅಯ್ಯರ್ ದುಃಖದಿಂದ ಭಾರತಿಯ ಮನೆಯಲ್ಲಿದ್ದರು.

ಅವರ ಪ್ರಯತ್ನದಿಂದ ಒಬ್ಬ ಡಾಕ್ಟರ್ ಬಂದರು. ಭಾರತಿಯ ಬಳಿ ಬಂದು ಮೈ ಹೇಗಿದೆ ಎಂದು ಕೇಳಿದರು. ಭಾರತಿಗೆ ಕೋಪ ಬಂದು ಬಿಟ್ಟಿತು. "ಯಾರಿಗೆ ಮೈ ಸರಿಯಿಲ್ಲ? ನನಗಲ್ಲ;

ನಿಮ್ಮೆಲ್ಲರಿಗೂ ಬೇರೆ ಕೆಲಸವಿಲ್ಲವೇನು ?'' ಎಂದು ಕೂಗಾಡಿದರು. ಡಾಕ್ಟರ್ ಬೇರೆ ದಾರಿಯಿಲ್ಲದೆ ಹೊರಟುಹೋದರು.

ಮೊದಲನೆಯ ಜಾವದಲ್ಲಿ ಮಡದಿ ಸೆಲ್ಲಮ್ಮಾಳ್ ಮಗಳು ಶಕುಂತಲಳನ್ನು ಕರೆದು ''ಅಪ್ಪನಿಗೆ ನೀನು ಔಷಧಿ ಕೊಟ್ಟರೆ ಒಂದು ವೇಳೆ ಕುಡಿಯಬಹುದು'' ಎಂದು ಹೇಳಿ ಔಷಧಿಯನ್ನು ತೆಗೆದು ತಂದೆಗೆ ಕೊಡುವಂತೆ ಹೇಳಿದರು. ಭಾರತಿಯ ಪ್ರೀತಿ ಪಾತ್ರವಾದ ಹೆಣ್ಣು ಶಕುಂತಲಾ. ಮಂದ ಬೆಳಕಿನಲ್ಲಿ ಶಕುಂತಲಾ ಔಷಧಿ ಕೊಡುವುದಾಗಿ ನೆನೆದು ಪಕ್ಕದಲ್ಲಿದ್ದ ಬಾರ್ಲಿಗಂಜಿಯನ್ನು ಭಾರತಿಗೆ ಕೊಟ್ಟು ಕುಡಿಯುವಂತೆ ಹೇಳಿದಳು. ಭಾರತಿ ಔಷಧ ಬೇಡವೆಂದರು. ಆದರೂ ಏನು ಯೋಚಿಸಿದರೊ ಗೊತ್ತಿಲ್ಲ. ಕೂಡಲೆ ಲೋಟವನ್ನು ತೆಗೆದುಕೊಂಡು ಒಂದು ಬಾಯಿ ಕುಡಿದರು. ''ಮಗಳೇ ನೀನು ಕೊಟ್ಟದ್ದು ಔಷಧಿಯಲ್ಲ, ಗಂಜಿ'' ಎಂದರು. ಮತ್ತೆ ಅವರಿಗೆ ಔಷಧಿಯನ್ನು ಕೊಡಲು ಶಕುಂತಲಳಿಗೆ ಮನಸ್ಸಾಗಲಿಲ್ಲ. ಹುಡುಗಿ ವಸಾರೆಯಲ್ಲಿ ಬಂದು ಮಲಗಿ ನಿದ್ದೆ ಮಾಡಿಬಿಟ್ಟಳು.

ಭಾರತಿಗೆ ಮೂರ್ಛೆ ಬರುವುದು, ನಂತರ ಚೈತನ್ಯ ಬರುವುದು ನಡೆಯುತ್ತಲೇ ಇತ್ತು. ಚೈತನ್ಯ ಬಂದಾಗ ಒಂದು ಬಾರಿ ನೀಲಕಂಠ ಬ್ರಹ್ಮಚಾರಿಯ ಬಳಿ ''ಅಮಾನುಲ್ಲಾ ಖಾನಿನ ಬಗ್ಗೆ ಒಂದು ನಿಬಂಧವನ್ನು ಬರೆದು ನಾಳೆ ಆಫೀಸಿಗೆ ತೆಗೆದುಕೊಂಡು ಹೋಗಬೇಕು'' ಎಂದು ಹೇಳಿದರು. ಅಮಾನುಲ್ಲಾ ಖಾನ್ ಆಗ ಆಫ್‌ಘಾನಿಸ್ಥಾನವನ್ನು ಆಳಿದ ದೊರೆ; ಬ್ರಿಟಿಷರ ಪರಮ ವಿರೋಧಿ, ಬಹಳ ಧೈರ್ಯವಂತ.

ಭಾರತಿ ಹೇಳಿದ ಈ ಮಾತುಗಳೇ ಅವರ ಕೊನೆಯ ಮಾತಾದವು.

ಮರುದಿನ ತಾನು ಖಂಡಿತ ಆಫೀಸಿಗೆ ಬರುವುದಾಗಿ ಅವರು ಹೇಳಿದ್ದರು. ಆದರೆ ಆ ದಿನ ರಾತ್ರಿಯೇ ಸುಮಾರು ಒಂದೂವರೆ ಗಂಟೆಗೆ ಭಾರತಿಯ ಪ್ರಾಣ ಅಗಲಿತು.

ಬೆಳಗಾಯಿತು.

ಭಾರತಿಯಾರ್ ನಿಧನರಾದ ಸಮಾಚಾರವನ್ನು ಅವರ ಮಿತ್ರರಿಗೆ ಹೇಳಿ ಕಳುಹಿಸಿದರು. ವಕೀಲ ದೊರೈಸ್ವಾಮಿ ಅಯ್ಯರ್, ಹಿಂದೀ ಪ್ರಚಾರಕ ಪಿ. ಹರಿಹರ ಶರ್ಮ, ನೀಲಕಂಠ ಬ್ರಹ್ಮಚಾರಿ, ವಿ. ಸಕ್ಕರೆ ಚೆಟ್ಟಿ, ಸುರೇಂದ್ರನಾಥ ಆರ್ಯ, ಮಂಡಯಂ ಶ್ರೀನಿವಾಸಾಚಾರ್ಯರ್, ಕೃಷ್ಣಸ್ವಾಮಿ ಮುಂತಾದವರು ಭಾರತಿಯ ದೇಹವನ್ನು ತೆಗೆದುಕೊಂಡು ಹೋಗಿ ಕೃಷ್ಣಾಂ ಪೇಟೆಸ್ಮಶಾನದಲ್ಲಿ ಅಗ್ನಿಗೆ ಸಮರ್ಪಿಸಿದರು. ಅಗ್ನಿದೇವನಿಗೆ ದೇಹವನ್ನು ಸಮರ್ಪಿಸುವ ಮೊದಲು ಭಾರತಿಯ ಬಗ್ಗೆ ಅವರ ಮಿತ್ರರು, ತಮಿಳಲ್ಲೂ, ತೆಲುಗಿನಲ್ಲೂ ಭಾಷಣ ಮಾಡಿದರು. ಒಟ್ಟು ಇಪ್ಪತ್ತು ಜನರು ಸೇರಿದ್ದರು.

ತಮಿಳು ಭಾಷೆಗೆ ಯೌವನವನ್ನೂ, ತಮಿಳು ಮಕ್ಕಳಿಗೆ ಹೊಸ ಪ್ರಾಣವನ್ನೂ ತಮಿಳು ದೇಶಕ್ಕೆ ಹೊಸ ಹಾದಿಯನ್ನೂ ಕೊಟ್ಟ ಮಹಾಕವಿಯ ಜೀವನ ಹಾಗೆ ಮುಕ್ತಾಯವಾಯಿತು.

ಭಾರತಿ ಅವರ ವ್ಯಕ್ತಿತ್ವ

ಭಾರತಿಯಿಂದ ಯುವಕರು ಕಲಿಯಬೇಕಾದ ವಿಷಯಗಳು ಯಾವುವು ?

ಮುಖ್ಯವಾಗಿ ಮೂರು -

ದೇಶಭಕ್ತಿ, ಜಾತಿಮತ ಭೇದವಿಲ್ಲದೆ ಇರುವುದು, ಸ್ತ್ರೀ ಸ್ವಾತಂತ್ರ್ಯ.

ದೇಶಭಕ್ತಿಯೆಂದರೆ ಅದರ ತಳಹದಿಯಾದ ಮಾತೃಭಾಷೆಯ ಬಗ್ಗೆ ಆಸಕ್ತಿ, ಮಾತೃಭೂಮಿಯ ಪ್ರತಿ ಭಕ್ತಿ ಮುಂತಾದವು. "ನನ್ನ ತಂದೆಯೂ ತಾಯಿಯೂ ಸುಖದಿಂದ ಬಾಳಿ ಬದುಕಿದ್ದು ಈ ದೇಶವೇ" ಎಂದರು ಭಾರತಿ. "ಅಚ್ಚ ತಮಿಳು ದೇಶ ಎನ್ನುವಾಗ ನನ್ನ ಕಿವಿಗಳಲ್ಲಿ ಜೇನುತುಪ್ಪ ಸುರಿದಂತಾಗುತ್ತದೆ, ಸುಖ ಲಭಿಸುತ್ತದೆ" ಎಂದು ತಮಿಳು ದೇಶದ ಬಗ್ಗೆ ಭಕ್ತಿಯನ್ನು ವ್ಯಕ್ತಪಡಿಸಿದರು. ಮಾತೃಭಾಷೆಯಾದ ತಮಿಳನ್ನು ಅವರು ಪ್ರಶಂಸಿಸಿದರು. ಮಾತೃಭಾಷೆ, ತಮಿಳುನಾಡು, ಭಾರತ ದೇಶ ಎಲ್ಲವನ್ನೂ ಬೆಳಗುವಂತಹ ಸುಂದರ ಭಕ್ತಿಯೇ ಭಾರತಿಯ ದೇಶಭಕ್ತಿಯಾಗಿತ್ತು.

ಭಾರತ ದೇಶದಲ್ಲಿ ಬಡವ ಬಲ್ಲಿದನಿಗೂ ಎಲ್ಲರಿಗೂ ಜಾತಿಮತ ಭೇದವಿಲ್ಲದೆ ಸಕಲ ಸೌಕರ್ಯಗಳನ್ನು ಒದಗಿಸಿಕೊಡಬೇಕು ಎಂದು ಭಾರತಿ ಬಯಸಿದರು. ಗಾಂಧೀಜಿಯವರು ಹರಿಜನ ಚಳುವಳಿಯನ್ನು ಪ್ರಾರಂಭಿಸುವುದಕ್ಕೆ ಮೊದಲೇ ಭಾರತಿಯಾರ್ ಹರಿಜನರೊಂದಿಗೆ ಮಿತ್ರರಾಗಿ ಪಳಗಿದರು. ಸಮೂಹದ ಕಾನೂನುಗಳನ್ನು ಅಲ್ಲಗಳೆದು ಹರಿಜನರೊಂದಿಗೆ ಆಹಾರವನ್ನು ಸೇವಿಸಿದರು.

ಹುಟ್ಟಿನಿಂದ ಉಚ್ಚ ನೀಚ ಎಂದು ಭಾವಿಸುವುದು ಪಾಪ ಎಂದರು ಅವರು. ಅದರಂತೆಯೇ ಧರ್ಮ ಸಂಪ್ರದಾಯಗಳ ಬೇಧಗಳನ್ನೂ ಅವರು ದ್ವೇಷಿಸಿದರು. ಎಲ್ಲ ಮತಗಳೂ ಗೌರವಕ್ಕೆ ಪಾತ್ರವಾದವು ಎಂದು ಪ್ರಶಂಸಿಸಿದರು. ಏಸುಕ್ರಿಸ್ತನನ್ನು ಹಾಡಿ ಹೊಗಳಿದರು. ಅಲ್ಲಾ ಬಗ್ಗೆ ಹಾಡುಗಳನ್ನು ಹಾಡಿದರು.

ಸಮಾಜದಲ್ಲಿ ಅರ್ಧ ಭಾಗದಷ್ಟು ಹೆಣ್ಣು ಮಕ್ಕಳು; ಹಾಗಿರುವಾಗ ಹೆಣ್ಣು ಮಕ್ಕಳನ್ನು ಗುಲಾಮರಂತೆ ನಡೆಸಿಕೊಂಡು ಬಂದು ದೇಶಕ್ಕೆ ಸ್ವಾತಂತ್ರ್ಯವನ್ನು ಗಳಿಸಿ ಕೊಟ್ಟರೂ ದೇಶ ಅರ್ಧ

ಸ್ವಾತಂತ್ರ್ಯವನ್ನೇ ಹೊಂದುವುದು ಎಂದು ನಿವೇದಿತಾ ದೇವಿ ಹೇಳಿದ ಮಾತು ಭಾರತಿಯ ಮನಸ್ಸಿನಲ್ಲಿ ಆಳವಾಗಿ ನೆಟ್ಟಿತ್ತು. ''ಸ್ತ್ರೀಯರನ್ನು ಅಲ್ಲಗಳೆಯುವ ಮೂರ್ಖತನವನ್ನು ಸುಟ್ಟು ಹಾಕುವ. ಸ್ತ್ರೀಯರು ಪುರುಷರು ಸರಿ ಸಮಾನವೆಂದು ಈ ದೇಶದಲ್ಲಿ ಬಾಳುವ'' ಎಂದು ಗಟ್ಟಿಯಾಗಿ ಕೂಗಿದರು ಭಾರತಿ.

''ತಮಿಳನೆ ದೇವರನ್ನು ನಂಬು'' ಎಂದು ಕೂಗಿದರು ಭಾರತಿ. ದೇವರು ಸೋಮಾರಿಗಳಿಗೆ ಸಹಾಯ ಮಾಡುವುದಿಲ್ಲ ಎಂದರು. ಮೂಢನಂಬಿಕೆ ಆಚಾರ ವಿಚಾರಗಳಲ್ಲಿ ಸೋಮಾರಿಯಾಗಿ ಇರುವವರನ್ನು ದ್ವೇಷಿಸಿದರು. ಕಾಲಕ್ಕೆ ತಕ್ಕಂತೆ ಸಮಾಜದಲ್ಲಿ ಬದಲಾವಣೆ ಮಾಡಬೇಕು; ಹೊಸಶಾಸ್ತ್ರಗಳನ್ನು ರಚಿಸಬೇಕು ಎಂದರು.

ಭಾರತಿ ಯಾವ ವಿಷಯವನ್ನು ಹೇಳಬೇಕಾದರೂ, ಎಂತಹ ಸಮಸ್ಯೆಯ ಸ್ಥಿತಿಯನ್ನು ಹೇಳಬಂದರೂ ಮನಸೋತು ಹೋಗುವಂತೆ ಅವರು ಹೇಳುತ್ತಿರಲಿಲ್ಲ. ಯಾವಾಗಲೂ ಧೈರ್ಯ ನಂಬಿಕೆ ಹುಟ್ಟುವಂತೆ ಬರೆಯುತ್ತಿದ್ದರು, ಮಾತನಾಡುತ್ತಿದ್ದರು. ಇದು ಅವರ ಬಳಿ ಯುವಕರು ಕಲಿಯಬೇಕಾದ ಮುಖ್ಯ ವಿಷಯವಾಗಿತ್ತು. ಯಾವಾಗಲೂ ಉತ್ಸಾಹ, ಕುತೂಹಲದಿಂದ ಅವರು ಬಾಳಿದರು. ಆದುದರಿಂದಲೇ ಭವಿಷ್ಯದಲ್ಲಿ ಉಂಟಾಗಲಿರುವ ಅವರ ಧೀರ್ಘದರ್ಶನ ಮತ್ತು ಸುಖಶಾಂತಿಯನ್ನು ಬಗೆಯಲು ಸಾಧ್ಯವಾಯಿತು.

ಸತ್ಯ, ಧರ್ಮ, ಧೈರ್ಯ, ತಿಳಿಯಾದ ಮಾತು ಭಾರತಿಯ ಅಲಂಕಾರಗಳಾಗಿದ್ದವು. ಅನೀತಿಯನ್ನು ನೋಡಿದಾಗ ಅವರು ಅದನ್ನು ಮುಚ್ಚುಮರೆ ಮಾಡುತ್ತಿರಲಿಲ್ಲ. ಓಡಿ ಅವಿತುಕೊಳ್ಳುತ್ತಿರಲಿಲ್ಲ. ಕೆಡುಕನ್ನು ನೋಡಿದಾಗ ''ಹೋರಾಡಿ ತುಳಿದು ಬಿಡುಮಗಳೆ'' ಎಂದು ಅವರು ಉಪದೇಶ ಮಾಡುತ್ತಿದ್ದರು.

ಆತ್ಮವಿಶ್ವಾಸ ಕೆಚ್ಚು ಕೊಂಡವರೆಂದರೂ ಭಾರತಿಗೆ ಸ್ವಲ್ಪವೂ ಅಹಂಕಾರವಿರಲಿಲ್ಲ. ಪ್ರಪಂಚವೆಲ್ಲವೂ ವ್ಯಾಪಿಸಿರುವ ಚಿಂತನಾಶೀಲರಾದವರು ಭಾರತಿ. ಎಲ್ಲರಿಗೂ ಸರಳವಾಗಿ ದೊರಕುವವರು ಭಾರತಿ. ಮಕ್ಕಳಲ್ಲೂ ಜನಸಾಮಾನ್ಯರಲ್ಲೂ ಪ್ರೀತಿ ವಿಶ್ವಾಸ ಹೊಂದಿದವರು.

ಅಷ್ಟೇ ಅಲ್ಲ ಮನುಷ್ಯರನ್ನು ಬಿಟ್ಟರೆ ಕಾಗೆ, ಗುಬ್ಬಚ್ಚಿಗಳಲ್ಲೂ ಪ್ರೀತಿ ತೋರಿಸುವಂತಹ ದೊಡ್ಡ ಮನಸ್ಸು ಅವರದು. ಇಷ್ಟೇ ಏಕೆ? ''ಸಮುದ್ರ ಬೆಟ್ಟಗಳು ನಮ್ಮ ಗುಂಪು'' ಎಂದು ಮೊಳಗಿದವರು ಅವರು.

ಅವರು ಒಂದು ನಿಮಿಷವೂ ಸುಮ್ಮನಿರುತ್ತಿರಲಿಲ್ಲ. ಚುರುಕುತನ, ಕಠಿಣ ಪರಿಶ್ರಮ ಅವರು ಗಳಿಸಿಕೊಂಡ ಸಂಪತ್ತಾಗಿತ್ತು. ಅವರ ಬರವಣಿಗೆಗಳನ್ನು ಓದಿದರೆ ನಮಗೂ ಅದೇ ಉತ್ಸಾಹ, ಚುರುಕು, ಶ್ರಮ ಮುಂತಾದ ಸದ್ಗುಣಗಳು ತಾನಾಗಿಯೇ ಉಂಟಾಗುತ್ತವೆ.

ಭಾರತದ ದೇಶದ ಮಕ್ಕಳು ಪ್ರಗತಿಯನ್ನು ಹೊಂದಿ ಬಾಳಲು ಎಷ್ಟೋ ಕನಸನ್ನು ಕಂಡರು. ಅವುಗಳಲ್ಲಿ ಕೆಲವು ನಿಜವಾಗಿವೆ. ಉಳಿದಿರುವ ಕನಸನ್ನು ನನಸಾಗಿ ಮಾಡುವುದು ಯುವಕರ ಕೈಯಲ್ಲಿದೆ.

ಭಾರತಿಯ ಕನಸುಗಳನ್ನು ವಿವರಿಸುವ ಒಂದು ಪುಟ್ಟ ಕವಿತೆಯೊಂದಿಗೆ ಈ ಕಥೆಯನ್ನು ಮುಗಿಸೋಣ.

ಮನಸ್ಸಿನಲ್ಲಿ ದೃಢತೆ ಬೇಕು
ವಾಣಿಯಲ್ಲಿ ಇಂಪು ಬೇಕು
ಒಳ್ಳೆಯದನ್ನು ನೆನೆಯಲು ಬೇಕು
ಬಯಸುವ ವಸ್ತು ನಮಗೆ ಸಿಗಬೇಕು
ಕನಸು ನನಸಾಗಬೇಕು

ಎಟ್ಟೈಯಪುರದಲ್ಲಿರುವ ಭಾರತಿಯಾರ್ ಸ್ಮಾರಕ ಮಂಟಪ



ಬಯಸಿದ್ದು ನಮ್ಮ ಕೈಗೆ ಬೇಗನೆ ಸಿಗಬೇಕು
ಹಣ ಮತ್ತು ಸುಖವೂ ಬೇಕು
ಭೂಮಿಯಲ್ಲಿ ಹೆಮ್ಮೆ ಬೇಕು
ಕಣ್ಣುಗಳು ತೆರೆಯಬೇಕು
ಕಾರ್ಯದಲ್ಲಿ ದೃಢತೆ ಬೇಕು
ಸ್ತ್ರೀ ಸ್ವಾತಂತ್ರ್ಯ ಬೇಕು
ದೇವರು ನಮ್ಮನ್ನು ಕಾಪಾಡಬೇಕು
ಭೂಮಿಯಲ್ಲಿ ಹುಟ್ಟಿದ ಜನ್ಮ ಸಾರ್ಥಕವಾಗಬೇಕು
ಆಕಾಶದ ಎಲ್ಲೆಡೆಯಲ್ಲೂ ಅದು ಕಾಣಿಸಬೇಕು
ಸತ್ಯ ಊರ್ಜಿತವಾಗಬೇಕು
ಓಂ ಓಂ ಓಂ ಓಂ



சி. சுப்பிரமணிய பாரதி

C. Subramania Bharati

ಮಡದಿ ಸೆಲ್ಲಮ್ಮಾಳೊಂದಿಗೆ ಭಾರತಿಯಾರ್ →

Printed by Aravali Printers New Delhi-20

